# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026




Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"



Call:9448633038/email:hampitimes@gmail.com




## ಆನಂದ ಬಾಣ




# ಸ್ಪಂದನ ಕೇಂದ್ರದಿಂದಲೂ ತ್ವರಿತ ಸೇವೆ

## ಸರ್ಕಾರಿ ಸೇವೆಗಳಿಗೆ ಜನರ ಅನಗತ್ಯ ಅಲೆದಾಟ ತಪ್ಪಿಸಲು ಸ್ಪಂದನ ಕೇಂದ್ರ ಸಹಕಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಂದಾಯ ಇಲಾಖೆ ಸೇರಿ ಭೂಮಿ ಸೇವೆ, ಮೋಜಿಣಿ ಸೇವೆ, ಆಧಾರ್ ಸೇವೆ ಮತ್ತು ಸಾಮಾಜಿಕ ಭದ್ರತಾ ಸೇವೆಗಳು ಶೀಘ್ರವಾಗಿ ಜನರಿಗೆ ತಲುಪುವ ನಿಟ್ಟಿನಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರ ಹಾಗೂ ಜಿಲ್ಲಾ ಕೇಂದ್ರದಲ್ಲಿ ಸ್ಪಂದನ ಕೇಂದ್ರಗಳು ತ್ವರಿತ ಸೇವೆಗಳನ್ನು ನೀಡಲು ಸನ್ನದ್ಧವಾಗಿವೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಸ್ಪಂದನ ಕೇಂದ್ರ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಂಗಳವಾರ ಮಾತನಾಡಿದರು, ಸರ್ಕಾರಿ ಸೇವೆಗಳಿಗೆ ಜನರು ಅನಗತ್ಯ ಅಲೆದಾಟ ತಪ್ಪಿಸಲು ಹಾಗೂ ಶೀಘ್ರ ಸೇವೆ ನೀಡಲು ಜಿಲ್ಲಾಡಳಿತ ಹೆಚ್ಚಿನ ಆದ್ಯತೆ ನೀಡಲಾಗಿದೆ. ಈಗಾಗಲೇ ತಾಲೂಕು ಮಟ್ಟದಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ ಅನೇಕ ಸೇವೆಗಳನ್ನು ನೀಡಲಾಗುತ್ತಿದ್ದು, ಜಿಲ್ಲಾ ಕೇಂದ್ರದಲ್ಲಿ ಸ್ಪಂದನ ಕೇಂದ್ರದಿಂದಲೂ ತ್ವರಿತ ಸೇವೆ ನೀಡಲು ಮುಂದಾಗಿದೆ. ಸಾರ್ವಜನಿಕರು ಸಾಮಾಜಿಕ ಭದ್ರತಾ ಸೇವೆಗಳು, ಕಂದಾಯ ಇಲಾಖೆ, ಭೂಮಿ ಸೇವೆ, ಅಧಾರ್ ನಂತಹ ಕೆಲಸಗಳಿಗೆ ಸ್ಪಂದನ ಕೇಂದ್ರಗಳಿಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ಪಡೆಯಬಹುದಾಗಿದೆ. ಮಧ್ಯವರ್ತಿಗಳಿಂದ ಅವಲಂಬಿತರಾಗದೇ ನೇರವಾಗಿ ಕೇಂದ್ರಗಳಲ್ಲಿನ ಸೇವೆಗಳನ್ನು ಸದುಪಯೋಗಪಡಿಸಿಬೇಕು ಎಂದರು.



ಸ್ಪಂದನ ಕೇಂದ್ರದಲ್ಲಿ ಸಾರ್ವಜನಿಕರಿಗೆ ನೀಡುವ ಸೇವೆಗಳು : ಜಾತಿ ಮತ್ತು ಆದಾಯ ದೃಢೀಕರಣ ಪತ್ರ, ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ, ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ, ಕೃಷಿ ಕಾರ್ಮಿಕ ದೃಢೀಕರಣ ಪತ್ರ, ವ್ಯವಸಾಯಗಾರರ ದೃಢೀಕರಣ ಪತ್ರ, ವಂಶವೃಕ್ಷ ದೃಢೀಕರಣ ಪತ್ರ, ಬೋನಫೈಡ್ ದೃಢೀಕರಣ ಪತ್ರ, ವಸತಿ ದೃಢೀಕರಣ ಪತ್ರ, ಭೂ ಹಿಡುವಳಿ ಪ್ರಮಾಣ ಪತ್ರ, ಜಮೀನು ಇಲ್ಲದಿರುವ ದೃಢೀಕರಣ ಪತ್ರ, ಜೀವಂತ ದೃಢೀಕರಣ ಪತ್ರ, ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ, ಮರುವಿವಾಹವಾಗದಿರುವ ದೃಢೀಕರಣ ಪತ್ರ, ಮೇಲುಸ್ಥರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ, ಗೇಣಿ ರಹಿತ ದೃಢೀಕರಣ ಪತ್ರ, ಜನಸಂಖ್ಯೆ ದೃಢೀಕರಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಸಣ್ಣ, ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ, ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ, ನಿರುದ್ಯೋಗಿ ದೃಢೀಕರಣ ಪತ್ರ, ವಿಧವಾ ದೃಢೀಕರಣ ಪತ್ರ, ಬೆಳೆ ದೃಢೀಕರಣ ಪತ್ರ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಸತಿ ಮತ್ತು ಅರ್ಹತಾ ದೃಢೀಕರಣ ಪತ್ರ, ಅಲ್ಪಸಂಖ್ಯಾತರ ದೃಢೀಕರಣ ಪತ್ರ, ಅಂಗವಿಕಲ ಪಿಂಚಣಿ, ವಿಧವಾ ಪಿಂಚಣಿ, ಸಂಧ್ಯಾ ಸುರುಕ್ಷಾ ಯೋಜನೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ದಾಪ್ಯ ಪಿಂಚಣಿ, ಮೈತ್ರಿ, ಮನಸ್ಥಿನಿ, ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಪಿಂಚಣಿ, ಆತ್ಮಹತ್ಯೆಗೊಳಗಾದ ರೈತರ ವಿಧವೆಯರ ಪಿಂಚಣಿ, ರಾಷ್ಟ್ರೀಯ ಕುಟುಂಬ ನೆರವು ಯೋಜನೆ, ಸ್ವತ್ತು ಪ್ರಮಾಣ ಪತ್ರ, ಜನರಲ್ ಸರ್ಟಿಫಿಕೆಟ್‌ಗಳಿಗೆ ಅರ್ಜಿ ಸಲ್ಲಿಸಲಾಗುವುದು.

ಈ ವೇಳೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಜಿಲ್ಲಾ ಮಟ್ಟದ ಅಧಿಕಾರಿಗಳು, ಸೇರಿದಂತೆ ತಹಶೀಲ್ದಾರರು, ಕಂದಾಯ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

### ಭೂಮಿ ಸೇವೆಗಳು

**ಪಹಣಿ ಪತ್ರಿ/ಉತಾರ, ಮುಟೇಶನ್ (ಹಕ್ಕು ಬದಲಾವಣೆ ಪ್ರತಿ), ಖಾತಾ ಪ್ರತಿ. ಮೋಜಿಣಿ ಸೇವೆಗಳು : 11 ಇ ನಕ್ಷೆ ಅಲಿನೇಷನ್ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ ಹದ್ದು ಬಸ್ತು, ಇ-ಸ್ವತ್ತು, ಸರ್ವೆ ದಾಖಲೆಗಳು. ಆಧಾರ್ ಸೇವೆಗಳು : ಆಧಾರ ಹೊಸ ನೊಂದಣಿ, ಕಡ್ಡಾಯ ಬಯೋಮೆಟ್ರಿಕ್ ನವೀಕರಣ, ಜೀವನ್ ಪ್ರಮಾಣ ಸೌಲಭ್ಯಗಳನ್ನು ನೀಡಲಾಗುತ್ತದೆ.**

## ಮೈಕ್ರೋ ನ್ಯೂಸ್

### 6ನೇ ತರಗತಿಗೆ ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಅಲ್ಪಸಂಖ್ಯಾತ ಇಲಾಖೆಯಡಿ ಕಾರ್ಯ ನಿರ್ವಹಿಸುವ ಮರಿಯಮ್ಮನಹಳ್ಳಿ ಮತ್ತು ಕಮಲಾಪುರ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಬಾಕಿ ಉಳಿದ 6ನೇ ತರಗತಿ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಖುದ್ದು ವಸತಿ ಶಾಲೆಗಳಿಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಮಲಾಪುರ ಮೊ.6366705213, ಮರಿಯಮ್ಮನಹಳ್ಳಿ ಮೊ.9535774399 ಸಂಖ್ಯೆಗೆ ಕರೆ ಮಾಡಬಹುದು ಎಂದು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.28 ರಂದು ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ 'ನಿಧಿ ಆಪ್ಕೆ ನಿಕಟ್' ಕಾರ್ಯಕ್ರಮವನ್ನು ಜು.28 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಸಂಡೂರು ತಾಲ್ಲೂಕಿನ ಸುಲ್ತಾನ್‌ಪುರದ ಜೆ.ಎಸ್.ಡಬ್ಲ್ಯೂ ಲಿಮಿಟೆಡ್ ನಲ್ಲಿ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ ಪ್ರವೀಣ್ ಅವರು ತಿಳಿಸಿದ್ದಾರೆ.

ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರು ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ. ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಜು.28 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

### ಜು.22 ರಂದು ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶ ಸೇರಿದಂತೆ) ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜು.22 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಕರ್ನಾಟಕ (20 ಅಂಶ) ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು ತಿಳಿಸಿದ್ದಾರೆ.

## ಹರಪನಹಳ್ಳಿ ತ್ರೈಮಾಸಿಕ ಪ್ರಗತಿ ಪರಿಶೀಲನೆ : ಫಾಗಿಂಗ್ ಮಾಡಲು ಗ್ರಾಪಂಗೆ ಸೂಚನೆ

# ಎನ್‌ಒಸಿ ನೀಡದ ಪುರಾತತ್ವ ಇಲಾಖೆ 108 ಹಳ್ಳಿಗಳಿಗಿಲ್ಲ ಶುದ್ಧ ಕುಡಿಯುವ ನೀರು

## ಮಕ್ಕಳಿಗೆ ಮೊಟ್ಟೆ ನೀಡದವರ ವಿರುದ್ಧ ಕ್ರಮಕ್ಕೆ ಶಾಸಕಿ ಎಂ.ಪಿ.ಲತಾ ಸೂಚನೆ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಮಳೆಗಾಲದ ಹಿನ್ನೆಲೆಯಲ್ಲಿ ಸೊಳ್ಳೆ ಉತ್ಪಾದನೆ ನಿಯಂತ್ರಿಸಲು ಎಲ್ಲ ಗ್ರಾಮ ಪಂಚಾಯಿತಿಗಳಲ್ಲೂ ಮುಂಜಾಗ್ರತಾ ಫಾಗಿಂಗ್ ಸಿಂಪಡಿಸುವಂತೆ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಪಿಡಿಒಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ರಾಜೀವಗಾಂಧಿ ಸಭಾಂಗಣದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಶಾಲಾ ಮಕ್ಕಳ ಮೊಟ್ಟೆ ವಿತರಣೆ ಮತ್ತು ಬಯಲು ತಿಪ್ಪೆಗಳ ತೆರವು:** ಶಿಕ್ಷಕರು ಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನ ಕಡ್ಡಾಯವಾಗಿ ಬೇಯಿಸಿದ ಮೊಟ್ಟೆಯನ್ನು ನೀಡಬೇಕು ಎಂದು ಸರ್ಕಾರಿ ಆದೇಶವಿದ್ದರೂ, ತಾಲೂಕಿನ ವಿವಿಧ ಶಾಲೆಗಳಲ್ಲಿ ಮೊಟ್ಟೆ ಬದಲು ಬಾಳೆಹಣ್ಣು ಅಥವಾ ಚಿಕ್ಕಿ ವಿತರಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಲೇಪಾಕ್ಷಪ್ಪ ಅವರಿಗೆ ಶಾಸಕಿ ತಿಳಿಸಿದರು.

ಮಾಚಿಹಳ್ಳಿ, ನೀಲಗುಂದ, ಗುಂಡಗತ್ತಿ, ತಲವಾಗಲು ಸೇರಿ ಹಲವು ಗ್ರಾಮಗಳಲ್ಲಿ ಮನೆಗಳ ಪಕ್ಕವೇ ತಿಪ್ಪೆ ಹಾಕುತ್ತಿರುವುದರಿಂದ ಸೊಳ್ಳೆಗಳ ಹೆಚ್ಚಳವಾಗಿ ರೋಗಗಳು ಉಲ್ಬಣಗೊಳ್ಳುತ್ತಿವೆ ಎಂದು ಶಾಸಕಿ ಅಸಮಾಧಾನ ವ್ಯಕ್ತಪಡಿಸಿದರು. ಇಂತಹ ಪ್ರಕರಣಗಳು ಕಂಡುಬರುವ ಗ್ರಾಮಗಳಲ್ಲಿ ಪಿಡಿಒಗಳು ಗಮನಹರಿಸಿ, ತಿಪ್ಪೆಗಳನ್ನು ಊರಾಚೆ ತೆರವುಗೊಳಿಸುವಂತೆ ಸೂಚಿಸಿದರು.



**ಕುಡಿಯುವ ನೀರು ಪರೀಕ್ಷೆ ಮತ್ತು ಆರೋಗ್ಯ ಸೇವೆಗಳ ಸುಧಾರಣೆ:** ತಾಲ್ಲೂಕು ವೈದ್ಯಾಧಿಕಾರಿ ಡಾ. ಪೃಥ್ವಿ ಮಾತನಾಡಿ, ನಳದಲ್ಲಿಯೇ ನೀರಿನ ಮಾದರಿ ಪರೀಕ್ಷಿಸುವ ಸಾಧನವನ್ನು ಪಂಚಾಯಿತಿ ಸಿಬ್ಬಂದಿಗೆ ಒದಗಿಸಿದರೆ, ನೀರಿನ ಕಲುಷಿತ ಪ್ರಮಾಣವನ್ನು ಅರಿತು ಸೂಕ್ತ ಕ್ರಮ ಕೈಗೊಳ್ಳಲು ಸಹಕಾರಿ ಆಗುತ್ತದೆ ಎಂದು ಸಲಹೆ ನೀಡಿದರು. ಇದಕ್ಕೆ ಧನಿಗೂಡಿಸಿದ ಕಾರ್ಯನಿರ್ವಾಹಕ ಅಧಿಕಾರಿ ವೈ.ಎಚ್. ಚಂದ್ರಶೇಖರ್, ಈಗಾಗಲೇ ಕೆಲವು ಪಂಚಾಯಿತಿಗಳಲ್ಲಿ ಈ ಕುರಿತು ಕ್ರಮ ಜರುಗಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಡಾ. ದತ್ತಾತ್ರೇಯ ಅವರು, ಆಸ್ಪತ್ರೆಯಲ್ಲಿ ಎರಡು ಆಂಬುಲೆನ್ಸ್‌ಗಳು ಕೆಟ್ಟು ನಿಂತಿದ್ದು, ಒಂದು ಚಾಲಕ ಸಹಿತ ಆಂಬುಲೆನ್ಸ್‌ನ ಅವಶ್ಯಕತೆ ಇದೆ ಎಂದು ತಿಳಿಸಿ, ಅನುದಾನ ನೀಡಲು ಮನವಿ ಮಾಡಿದರು. ಬಾಣಂತಿ ಸಾವಿನ ಕುರಿತು ವರದಿ ನೀಡುವಂತೆ ಶಾಸಕಿ ಲತಾ ಸೂಚಿಸಿದರು.

**ಕೃಷಿ ಮತ್ತು ಕುಡಿಯುವ ನೀರು ಯೋಜನೆಗಳ ಪ್ರಗತಿ:** ಕೃಷಿ ಸಹಾಯಕ ನಿರ್ದೇಶಕ ಉಮೇಶ್ ವಿ.ಸಿ. ಮಾತನಾಡಿ, ಪ್ರಸಕ್ತ ವರ್ಷದಲ್ಲಿ ತಾಲ್ಲೂಕಿನಲ್ಲಿ 84 ಸಾವಿರ ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದ್ದು, ಈಗಾಗಲೇ 78 ಸಾವಿರ ಹೆಕ್ಟೇರ್ ಬಿತ್ತನೆ ಮಾಡಲಾಗಿದೆ ಎಂದು ತಿಳಿಸಿದರು. ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಯೂರಿಯಾವನ್ನೇ ಏಕೈಕ ಗೊಬ್ಬರ ಎಂದುಕೊಂಡಿರುವ ರೈತರಿಗೆ ನ್ಯಾನೋ ಯೂರಿಯಾ ಬಳಕೆಯ ಕುರಿತು ಹಳ್ಳಿ ಹಳ್ಳಿಯಲ್ಲಿ ಪ್ರಚಾರಪಡಿಸುವಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ಶಾಸಕಿ ಸೂಚಿಸಿದರು.

ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಕಿರಣ್ ನಾಯ್ಕ್, ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ತಿಳಿಸಿದರು. ಆದರೆ, ಪುರಾತತ್ವ ಇಲಾಖೆ ಎನ್‌ಒಸಿ (ನಿರಾಕ್ಷೇಪಣಾ ಪ್ರಮಾಣಪತ್ರ) ನೀಡದಿರುವ ಕಾರಣ ಚಿಗಟೇರಿ, ನಿಚ್ಚವ್ವನಹಳ್ಳಿ ಸೇರಿದಂತೆ ಇತರೆ 108 ಹಳ್ಳಿಗಳ ಶುದ್ಧ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ ತೊಂದರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕಿ ಲತಾ, ಒಂದೂವರೆ ವರ್ಷದಿಂದ ವಿಳಂಬವಾಗಿರುವ ಕಾರಣ, ಕೂಡಲೇ ಸಂಸದರ ಶಿಫಾರಸ್ಸು ಪಡೆದು ಪುರಾತತ್ವ ಇಲಾಖೆಯ ಅನುಮತಿ >>3

## ಎಸ್ಪಿ ಶ್ರೀಹರಿಬಾಬು ಬಿ.ಎಲ್ ಬೀಳ್ಕೊಡುಗೆ

# ವಿಜಯನಗರ ಜನರ ಸಹಕಾರ ಸ್ಮರಿಸಿದ ಎಸ್ಪಿ



■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಪ್ರಸಿದ್ಧ ಹಂಪಿಗೆ ಹೆಚ್ಚಿನ ಜಾಗೃತಿಯ ಅಗತ್ಯವಿದೆ. ವಿಜಯನಗರ ಜಿಲ್ಲೆಯಲ್ಲಿ ಕಳೆದ 2.8 ವರ್ಷದ ಅವಧಿಯಲ್ಲಿ ಅಪರಾಧ ತಡೆಗಟ್ಟುವಲ್ಲಿ ಜನತೆಯ ಸಹಕಾರ ಅತ್ಯುತ್ತಮವಾಗಿದೆ. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ನಾಗರಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ವಿಜಯಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಹೇಳಿದರು.

ನಗರದ ಎಸ್ಪಿ ಕಚೇರಿಯಲ್ಲಿ ಮಂಗಳವಾರ ಸಂಜೆ ಹಮ್ಮಿಕೊಂಡಿದ್ದ ಎಸ್ಪಿ ಶ್ರೀಹರಿಬಾಬು ಅವರಿಗೆ ಬೀಳ್ಕೊಡುಗೆ ಮತ್ತು ವಿಜಯನಗರ ನೂತನ ಎಸ್ಪಿ ಎಸ್.ಜಾಹ್ನವಿ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು. ವಿಜಯನಗರದಲ್ಲಿ ನಡೆದ ಜಿ-20 ಕಾರ್ಯಕ್ರಮಕ್ಕೆ 32 ದೇಶಗಳ ರಾಯಭಾರಿಗಳು ಆಗಮಿಸಿದ್ದರು. ಪ್ರಧಾನಿ ಅವರು ಹೊಸಪೇಟೆಗೆ ಆಗಮಿಸಿದ ಸಂದರ್ಭದಲ್ಲೂ ಪೊಲೀಸ್ ಸಿಬ್ಬಂದಿಗಳು ಮತ್ತು ಜನರ ಸಹಕಾರದಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲಾಯಿತು. ವಿಜಯನಗರದಲ್ಲಿ ದೊಡ್ಡ ಜಾತ್ರೆಗಳು ನಡೆಯುತ್ತವೆ. ಬಂದೋಬಸ್ತ್ ಕಲ್ಪಿಸುವಲ್ಲಿ ಬಹುದೊಡ್ಡ ಅನುಭವ ನೀಡಿದೆ ಎಂದರು.

**ಮಕ್ಕಳ ಮೊಬೈಲ್ ಬಳಕೆಯ ಕುರಿತು ಎಚ್ಚರಿಕೆ :**

ಪೋಷಕರಿಗೆ ವಿಶೇಷವಾಗಿ ಮಕ್ಕಳು ಮೊಬೈಲ್ ಫೋನ್ ಬಳಸುವ ಮೊದಲು ಎಚ್ಚರಿಕೆ ವಹಿಸುವಂತೆ ಕರೆ ನೀಡಿದರು. "ಮಕ್ಕಳ ಕೈಗೆ ಮೊಬೈಲ್ ನೀಡುವ ಮುನ್ನ ಯೋಚಿಸಿ. ತಿಳಿದು ತಿಳಿಯದೇ ಮಾಡಿದ ಸಣ್ಣ ತಪ್ಪಿಗೂ ಭವಿಷ್ಯದಲ್ಲಿ ದೊಡ್ಡ ಬೆಲೆ ತೆರಬೇಕಾಗಬಹುದು. ಸರ್ಕಾರಿ ನೌಕರಿ ದೊರೆತರೂ, ನಡಾವಳಿಕೆ ಪ್ರಮಾಣಪತ್ರ ಸಿಗದೆ ಕೆಲಸ ಕೈತಪ್ಪಬಹುದು. ಪಾಲಕರು ಈ ಬಗ್ಗೆ ಎಚ್ಚರ ವಹಿಸಬೇಕು" ಎಂದು ಅವರು ಎಚ್ಚರಿಸಿದರು. ಸೈಬರ್ ಅಪರಾಧಗಳ ಹೆಚ್ಚಳದ ಹಿನ್ನೆಲೆಯಲ್ಲಿ, ಮಕ್ಕಳ ಆನ್‌ಲೈನ್ ಚಟುವಟಿಕೆಗಳ ಬಗ್ಗೆ ನಿಗಾ ವಹಿಸುವುದು ಅನಿವಾರ್ಯ ಎಂಬುದನ್ನು ಅವರು ಪರೋಕ್ಷವಾಗಿ ಸೂಚಿಸಿದರು.

**ಜಿಲ್ಲೆಯಲ್ಲಿ ಸುಧಾರಿಸಿದ ಕಾನೂನು ಸುವ್ಯವಸ್ಥೆ :**

ವಿಜಯನಗರ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಉತ್ತಮಗೊಂಡಿರುವುದನ್ನು ಪ್ರಶಂಸಿಸಿದರು. "ವಿಜಯನಗರದಲ್ಲಿ ಯಾವುದೇ ದೊಡ್ಡ ಪ್ರಮಾಣದ ಅಪರಾಧಗಳು ನಡೆದಿಲ್ಲ. ಕೊಲೆ ಮತ್ತು ಕಳ್ಳತನದಂತಹ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿವೆ" ಎಂದು ಅವರು ಹೇಳಿದರು. ಆದಾಗ್ಯೂ, ಇನ್ನಷ್ಟು ಅತ್ಯುತ್ತಮ ಸೇವೆಗಳನ್ನು ಒದಗಿಸಲು ಅವಕಾಶವಿದೆ ಮುಂದಿನ ದಿನಗಳಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಮತ್ತಷ್ಟು ಯಶಸ್ಸು ಸಾಧಿಸಲಿ ಎಂಬ ಆಶಯ ವ್ಯಕ್ತಪಡಿಸಿದರು.

## ಎಸ್.ಜಾನ್ಹವಿ ನೂತನ ಎಸ್ಪಿ : ಅಧಿಕಾರಿ ಸ್ವೀಕಾರ



ಎಸ್. ಜಾನ್ಹವಿ ಅವರು ಭಾರತೀಯ ಪೊಲೀಸ್ ಸೇವೆಯಲ್ಲಿ (IPS) ಒಬ್ಬ ಪ್ರಮುಖ ಮಹಿಳಾ ಅಧಿಕಾರಿಯಾಗಿದ್ದು, ಕರ್ನಾಟಕ ರಾಜ್ಯ ಪೊಲೀಸ್ ಸೇವೆಯ 2019ನೇ ತಂಡದ ಅಧಿಕಾರಿ, ಮಂಗಳವಾರ ರಾತ್ರಿ ಎಸ್ಪಿ ಶ್ರೀಹರಿಬಾಬು ಬಿ.ಎಲ್ ಅವರಿಂದ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾರಿ ಅಧಿಕಾರ ಸ್ವೀಕಾರ ಮಾಡಿದರು.

# ವಿದ್ಯುತ್ ಶಾರ್ಟ್ ಸರ್ಕಿಟ್ : ಗುಡಿಸಲು ಮನೆ ಭಸ್ಮ





■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಮಹಾದೇವಪುರ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್ ನಿಂದ ಬೆಂಕಿ ಹೊತ್ತಿಕೊಂಡು ವಾಸದ ಮನೆ ಭಸ್ಮವಾಗಿ ಅಪಾರ ಹಾನಿ ಸಂಭವಿಸಿದೆ.

ಗ್ರಾಮದ ಚೆನ್ನಮ್ಮ ಗುರುಸ್ವಾಮಿ ಅವರಿಗೆ ಸೇರಿದ ಗುಡಿಸಲು ಮನೆಗೆ ಬೆಂಕಿ ಹೊತ್ತಿಕೊಂಡು ಮನೆಯಲ್ಲಿದ್ದ ಸಾಮಗ್ರಿಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ಬೆಂಕಿ ಬಿದ್ದ ಬಳಿಕ ಕೂಡ್ಲಿಗಿ ಅಗ್ನಿಶಾಮಕ ಸಿಬ್ಬಂದಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಕೂಡಲೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲಾಗಲೇ ಮನೆಯಲ್ಲಿದ ಸಿಲಿಂಡರ್, ಟಿವಿ, ದವಸ ಧಾನ್ಯಗಳು, ಬಟ್ಟೆ ಬರೆಗಳು ಕಾಲ್ ತೋಲ ಬಂಗಾರ, 40,000 ನಗದು, ಆಸ್ತಿ ಪತ್ರಗಳು, ಗೃಹ ಸಾಮಗ್ರಿಗಳು ಸುಟ್ಟು ಹೋಗಿದೆ. ಅಂದಾಜು 5 ಲಕ್ಷ ನಷ್ಟವುಂಟಾಗಿದೆ ಎಂದು ಕುಟುಂಬಸ್ಥರು ಅಳಲು ತೋಡಿಕೊಂಡಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯವಾಗಿಲ್ಲ. ಗುಡೆಕೋಟೆ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಈ ಸಮಯದಲ್ಲಿ ಎಸ್.ಎಂ ಪಾಷಾ ಸಹಾಯಕ ಠಾಣಾಧಿಕಾರಿ, ಮಂಜುನಾಥ್ ಸ್ವಾಮಿ ಪ್ರಮುಖ ಅಗ್ನಿಶಾಮಕ, ದೇವೇಂದ್ರ ಸಿ ಅಗ್ನಿಶಾಮಕ ಚಾಲಕ, ಅಗ್ನಿಶಾಮಕ ಸಿಬ್ಬಂದಿಗಳು ವೈ ಸಿದ್ದೇಶ್, ರಮೇಶ್, ವೀರೇಂದ್ರ ಅಗ್ನಿ ಶಾಮಕ ದಳದ ಸಿಬ್ಬಂದಿಗಳಿಂದ ಕಾರ್ಯನಿರ್ವಹಿಸಿ ಅಗ್ನಿ ಅವಘಡ ತಡಿಯಲು ಪ್ರಯತ್ನ ನಡೆಸಿದ್ದಾರೆ.

ಹಂಪಿ ಟೈಮ್ಸ್
HAMPI TIMES

# ಬಿ.ಸರೋಜಾದೇವಿ ಒಬ್ಬ ಮೇರು ನಟಿ: ಸಿಎಂ



■ **ಹಂಪಿ ಟೈಮ್ಸ್ ಬೆಂಗಳೂರು:**
ಬಿ.ಸರೋಜಾದೇವಿ ಒಬ್ಬ ಮೇರು ನಟಿ. ಪಂಚಭಾಷೆ ತಾರೆಯಾಗಿ ಕನ್ನಡ, ತಮಿಳು, ತೆಲುಗು ಹಿಂದಿ ಭಾಷೆಗಳಲ್ಲಿ ಪಾತ್ರಗಳನ್ನು ಮಾಡಿ ಸೈ ಎನಿಸಿ ಕೊಂಡಿದ್ದ ಅದ್ಭುತ ನಟಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಮಂಗಳವಾರ ಮಲ್ಲೇಶ್ವರಂನ 11 ನೇ ಅಡ್ಡ ರಸ್ತೆಯಲ್ಲಿರುವ ಬಹುಭಾಷಾ ತಾರೆ ಹಿರಿಯ ನಟಿ ದಿವಂಗತ ಪದ್ಮಭೂಷಣ ಶ್ರೀ ಮತಿ ಬಿ ಸರೋಜ ದೇವಿ ಇವರ ಪ್ರಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ನಂತರ ಮಾಧ್ಯಮ ದವರೊಂದಿಗೆ ಮಾತನಾಡಿದರು. ಬಹುಭಾಷಾ ನಟಿ ಬಿ.ಸರೋಜಾದೇವಿ ಅವರ ನಿಧನ ಇಡೀ ಚಿತ್ರರಂಗಕ್ಕೆ ದೊಡ್ಡ ಆಘಾತವನ್ನುಂಟು ಮಾಡಿದೆ. ಚಿಕ್ಕವಯಸ್ಸಿನಲ್ಲಿಯೇ ಸಿನಿಮಾರಂಗವನ್ನು ಪ್ರವೇಶಿ ಏಳು ದಶಕಗಳ ಕಾಲ ಕಲಾವಿದೆಯಾಗಿದ್ದವರು. ಅಭಿನವ ಸರಸ್ವತಿ ಎಂಬ ಬಿರುದು ಚಿಕ್ಕವಯಸ್ಸಿಗೆ ದೊರೆತಿತ್ತು. ಎಲ್ಲಾ ಭಾಷೆಯ ಹೆಸರಾಂತ ನಟರೊಂದಿಗೆ ನಟಿಸಿದ್ದರು.ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ದೇವ್ ಆನಂದ್, ಎಂ.ಜಿ.ಆರ್, ಎನ್.ಟಿ.ಆರ್, ಶಿವಾಜಿ ಗಣೇಶನ್, ರಾಜ್ ಕುಮಾರ್ ಅವರೊಂದಿಗೂ ಅನೇಕ ಚಿತ್ರಗಳಲ್ಲಿ ನಟಿಸಿದ್ದರು ಎಂದರು.

**ಕನ್ನಡ ಚಿತ್ರರಂಗ ಬೆಳೆಯಲು ಅಪಾರ ಕೊಡುಗೆ :** ಯಾವುದೇ ಪಾತ್ರಕ್ಕೂ ಜೀವ ತುಂಬುತ್ತಿದ್ದರು. ಖಾಸಗಿ ಜೀವನದಲ್ಲಿಯೂ ಶಿಸ್ತುಬದ್ಧ ಜೀವನವನ್ನು ನಡೆಸಿದವರು. ಕನ್ನಡ ಚಿತ್ರರಂಗ ಬೆಳೆಯಲು ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಸಾವಿನಿಂದ ಚಿತ್ರರಂಗಕ್ಕೆ ಅಪಾರವಾದ ನಷ್ಟವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದ ವರಿಗೆ ಅವರ ಸಾವಿನಿಂದಾದ ದುಃಖವನ್ನು ಭರಿಸುವ ಶಕ್ತಿ ದೊರೆಯಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

**ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ :** ಅವರ ಅಂತ್ಯ ಸಂಸ್ಕಾರವನ್ನು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಗುವುದು. ಅವರ ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದರು.

**ದೊಡ್ಡ ವ್ಯಕ್ತಿತ್ವವಿದ್ದ ನಟಿ :** ಅನೇಕ ಬಾರಿ ಸರೋಜಾದೇವಿಯವರನ್ನು ಭೇಟಿ ಮಾಡಿದ್ದೇನೆ. ಎಲ್ಲರೊಂದಿಗೆ ಆತ್ಮೀಯವಾಗಿ, ಪ್ರೀತಿಯಿಂದ ಮಾತನಾಡುತ್ತಿದ್ದರು. ದೊಡ್ಡ ವ್ಯಕ್ತಿತ್ವವಿದ್ದ ನಟಿ ಅವರು ಎಂದು ತಿಳಿಸಿದರು. ಅವರ ಸಿನಿಮಾಗಳಲ್ಲಿ ಮಲ್ಲಮ್ಮನ ಪವಾಡ, ಕಿತ್ತೂರು ಚೆನ್ನಮ್ಮ, ಭಾಗ್ಯವಂತರು, ಬಬ್ರುವಾಹನ, ನ್ಯಾಯವೇ ದೇವರು ಸೇರಿದಂತೆ ಅನೇಕ ಚಿತ್ರಗಳನ್ನು ನೋಡಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

**ರಸ್ತೆಗೆ ಸರೋಜಾದೇವಿ ಹೆಸರು : ಬಿಬಿಎಂಪಿ ಯೊಂದಿಗೆ ಚರ್ಚೆ**
ಸರೋಜಾದೇವಿಯವರ ಹೆಸರನ್ನು ಅವರು ವಾಸಿಸುತ್ತಿದ್ದ ರಸ್ತೆಗೆ ಇಡಬೇಕೆಂಬ ಆಸೆಯಿತ್ತು ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು ಈ ಬಗ್ಗೆ ಬಿಬಿಎಂಪಿ ಯೊಂದಿಗೆ ಚರ್ಚಿಸುವುದಾಗಿ ಹೇಳಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಶಾಪವಾಗದಿರಲಿ ಬಾಳಿನಿಳಿಸಂಜೆ...!

ನಮ್ಮ ಅಂತರಂಗದ ಕಸ ಗೂಡಿಸಲು ನೂರಾರು ಸಂತರು ಶರಣರು ಈ ಭೂಮಿಗೆ ಬಂದರೂ ಏಕೋ ಏನೋ ನಮ್ಮ ಹೃದಯ ಇನ್ನೂ ಹಸನಾಗಲೇ ಇಲ್ಲ ಎಂಬುದಕ್ಕೆ ಸಾಕ್ಷಿಯಂತಿರುವ ಈ ನೆಲದ ಹಲವಾರು ಸಾಮಾಜಿಕ ಸಮಸ್ಯೆಗಳ ಸಾಲಿನಲ್ಲಿ ವೃದ್ಧಾಪ್ಯವು ಮುಂಚೂಣಿಯಲ್ಲಿ ನಿಂತಿರುವುದು ಇಂದಿನ ಆಧುನಿಕ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ.

ಮಾತೃ ದೇವೋಭವ,ಪಿತೃ ದೇವೋಭವ ಎಂಬ ಸಂಸ್ಕೃತಿ ಇದ್ದ ಈ ನೆಲದಲ್ಲಿ ಇತ್ತೀಚಿಗೆ ವೃದ್ಧ ಅಪ್ಪ-ಅಮ್ಮಂದಿರನ್ನು ಸರಿಯಾಗಿ ನಡೆಸಿಕೊಳ್ಳದೇ, ಶುಶ್ರೂಷೆ ಮಾಡದೇ ಆಶ್ರಯವನ್ನೂ ಸಹ ಕೊಡದೆ ಇರುವುದನ್ನೊಮ್ಮೆ ನೋಡಿದಾಗ ಕೌಟುಂಬಿಕ ಪ್ರಜ್ಞೆಯಲ್ಲಿನ ಇಂದಿನ ಯುವಜನಾಂಗದ ಹೊಣೆಗೇಡಿತನವನ್ನು ಬಿಂಬಿಸದೇ ಇರಲಾರದು. ತಾವೆಂದೂ ವೃದ್ಧರೇ ಆಗುವುದಿಲ್ಲವೇನೋ ಎಂಬಂತೆ ವರ್ತಿಸುತ್ತಿರುವ ಇಂದಿನ ಬಹುತೇಕ ಮಕ್ಕಳು, ವಯಸ್ಸಾದವರು ಮನೆಯಲ್ಲಿದ್ದರೆ ತಮ್ಮ ಖಾಸಗಿ ಜೀವನಕ್ಕೆ ಅಡ್ಡಿ ಅಂತಲೋ, ಮದುವೆಯ ನಂತರ ತಮ್ಮ ಏಕತಾನತೆಗೆ ಭಂಗವೆಂತಲೋ ಅಥವಾ ವಯಸ್ಸಾದವರಿಗೆ ಆರೋಗ್ಯ ಮತ್ತೊಂದಕ್ಕೆ ಮಾಡುವ ಖರ್ಚು ವ್ಯರ್ಥವೆಂತಲೋ ತಿಳಿದು ತಂದೆ-ತಾಯಿಯರನ್ನು ವೃದ್ಧಾಶ್ರಮದಲ್ಲಿಡುವ ಸಂಸ್ಕೃತಿ ಒಂದೆಡೆಯಾದರೆ,

ಇನ್ನು ಹೆತ್ತವರು ಅನಾಥರಾಗಲು ವೃದ್ಧಾಶ್ರಮಗಳೇ ಆಗಬೇಕಂತೇನಿಲ್ಲ ಅದೆಷ್ಟೋ ಮನೆಗಳಲ್ಲಿ ಮಕ್ಕಳು, ಸೊಸೆ, ಮೊಮ್ಮಕ್ಕಳಿಂದ ಅನಾಥರ ಪ್ರಜ್ಞೆಗೆ ಒಳಗಾಗಿ ಎಲ್ಲರಿದ್ದರೂ ಏಕತಾನತೆಯ ಬೆಂಕಿಯಲ್ಲಿ ಬೇಯುತ್ತಿರುವುದರಿಂದ ವೃದ್ಧರ ಪಾಲಿಗಿಂದು ಅದೆಷ್ಟೋ ಮನೆಗಳು ಕೂಡ ವೃದ್ಧಾಶ್ರಮಗಳೇ ಆಗಿಬಿಟ್ಟಿವೆ. ದುಡಿಮೆಯ ಮಧ್ಯೆ ಹೆತ್ತವರನ್ನು ವಿಚಾರಿಸಲು ಪುರುಸೊತ್ತಿಲ್ಲ ಎನ್ನುವ ಮಗ, ತನ್ನ ತಂದೆ-ತಾಯಿಗಳಷ್ಟೇ ದೇವರೆಂದರಿತಂತಿರುವ ಹೆಂಡತಿ, ತಂತ್ರಜ್ಞಾನದ ಸುಳಿಯಲ್ಲಿ ಅಜ್ಜ -ಅಜ್ಜಿಯ ಪರಿಕಲ್ಪನೆಯಿಂದ ದೂರವೇ ಉಳಿದಿರುವ ಮೊಮ್ಮಕ್ಕಳು ಇಂತಹ ಮನೆಯ ಪರಿಸರದಲ್ಲಿ ಅತ್ತ ಬದುಕಲೂ ಆಗದೆ, ಇತ್ತ ಸಾಯಲೂ ಆಗದೇ ದಿನಗಳನ್ನು ನೂಕುತ್ತಿರುವ ಅದೆಷ್ಟೋ ವೃದ್ಧರ ಕಣ್ಣುಗಳನ್ನು ಒಮ್ಮೆ ಇಣುಕಿದಾಗ ನೂರಾರು ಗೋಜಲುಗಳು ಗೋಚರಿಸುತ್ತವೆ..

ಇಂದು ತಂದೆ-ತಾಯಿಯ ಆಸ್ತಿಯನ್ನು ಎಳ್ಳಷ್ಟು ಬಿಡದೇ ಹಂಚಿಕೊಳ್ಳುವ ಮಕ್ಕಳು ಕೊನೆಗೆ ತಂದೆ-ತಾಯಿಗಳು ಯಾರ ಪಾಲಿಗೆ ಇರಲಿ? ಎಂದು ಕೇಳಿದಾಗ ಎಲ್ಲರಲ್ಲೂ ಮೌನ, ಕೈತುಂಬಾ ದುಡಿಯುತ್ತಿದ್ದರೂ ಹೆತ್ತವರನ್ನು ನೋಡಿಕೊಳ್ಳಲು ಯಾರಲ್ಲೂ ಧೈರ್ಯವಿಲ್ಲ..! ಇದು ರಾತ್ರಿಯನ್ನು ಹಗಲಾಗಿಸಿ ಪ್ರತಿ ಕಾಸಿನ ಮೇಲೂ ಮಕ್ಕಳ ಹೆಸರನ್ನೇ ಕೆತ್ತಿಟ್ಟು ಕೊನೆಗೆ ಅವರಿಂದಲೇ ಯಾತನೆ ಅನುಭವಿಸುತ್ತಿರುವ ವಯೋವೃದ್ಧರ ಇಂದಿನ ಬದುಕಿನ ಚಿತ್ರಣ. ಮತ್ತೆ ಬಹುತೇಕ ವೃದ್ಧರ ಬದುಕು ಈ ಚೌಕಟ್ಟಿನಲ್ಲಿಯೇ ಬಂದು ಕೂರುತ್ತದೆ. ಬೇಡವೆಂದರೂ ವಯಸ್ಸು ಸವೆದು ವೃದ್ಧಾಪ್ಯವನ್ನು ಹೊರಲೇಬೇಕು ಬೇಡವೆನ್ನಲು ಬದಲಿ ಆಯ್ಕೆಯಾದರೂ ಎಲ್ಲಿವೆ...? ಹಾಗಾಗಿ ಇಂದಿನ ವೃದ್ಧರ ಬದುಕು ಅಶಾಂತಿ ಮತ್ತು ವೇಧನಾಮಯವಾಗಿರಲು ಮೂಲ ಕಾರಣ ಆಧುನಿಕ ಬಿರುಗಾಳಿಯಲ್ಲಿ ಮಾನವೀಯತೆ ಎಂಬುದು ತರಗೆಲೆಯಂತೆ ಹಾರಿಹೋಗಿ ಸಂಬಂಧಗಳನ್ನು ಕಮರ್ಷಿಯಲ್ ಆಗಿ ಮಾಡಿರುವುದು.

ಹಿಂದಿನ ಕಾಲದಲ್ಲಿ ಅಂದರೆ ಬಹುಶಃ 60 –70 ವರ್ಷಗಳ ಹಿಂದೆ ಕೂಡು ಕುಟುಂಬವಿದ್ದ ಕಾಲದಲ್ಲಿ ಅಜ್ಜ-ಅಜ್ಜಿಯನ್ನು ಒಳಗೊಂಡ ಬಹಳಷ್ಟು ಜನರು ಒಂದೇ ಕುಟುಂಬದಲ್ಲಿ ಅನ್ಯೋನ್ಯವಾಗಿ ವಾಸಮಾಡುತ್ತಿದ್ದರು. ಆಗಿನ ಸಂಸಾರಗಳು ದೊಡ್ಡವಾಗಿದ್ದವು ಎಲ್ಲರ ಮನಸ್ಸುಗಳು ಕೂಡಾ ದೊಡ್ಡವಾಗಿದ್ದವು ಕ್ರಮೇಣ ಸಂಸಾರ ಚಿಕ್ಕದಾಗುತ್ತಾ ಬಂದಂತೆ ಮನಸುಗಳು ಚಿಕ್ಕದಾಗುತ್ತಾ ಬಂದವು. ತಮ್ಮ ಮಕ್ಕಳನ್ನು ಮಗುವಿದ್ದಾಗನಿಂದಲೂ ಅಕ್ಕರೆಯಿಂದ ಸಾಕಿ ಬೆಳೆಸಿ ದೊಡ್ಡವರನ್ನಾಗಿ ಮಾಡಿ ಉದ್ಯೋಗ ಕಲ್ಪಿಸಿಕೊಟ್ಟು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಿ, ಮಕ್ಕಳು ದೊಡ್ಡವರಾಗಿದ್ದಾರೆ ಇನ್ನೇನು ನಮಗೆ ಯೋಚನೆ ಇಲ್ಲ ಅವರೇ ನಮ್ಮ ಯೋಗಕ್ಷೇಮ ನೋಡಿಕೊಳ್ಳುತ್ತಾರೆ ಎಂಬ ಭಾವನೆ ಪ್ರತಿಯೊಬ್ಬ ತಂದೆ-ತಾಯಿಗಳಿಗೆ ಇರುವುದು ಸಹಜ. ಕೆಲವು ಮಕ್ಕಳು ತಂದೆ-ತಾಯಿಯರ ಅಪೇಕ್ಷೆಯಂತೆ ಓದು ಕಲಿತು ಕೆಲಸಕ್ಕೆ ಸೇರಿ ಚೆನ್ನಾಗಿ ನೋಡಿಕೊಳ್ಳುತ್ತಾ ಬಂದಿದ್ದಾರೆ ಎಲ್ಲಿಯವರೆಗೆ ಅಂದರೆ ಅವರ ವಿವಾಹವಾಗುವವರೆಗೆ ಮಾತ್ರ. ಮಕ್ಕಳಿಗೆ ತಂದೆತಾಯಿಗಳ ಮೇಲೆ ಪ್ರೀತಿ ಇರುತ್ತದೆ. ಒಂದು ವಿವಾಹ ಮಾಡಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡು ನೆಮ್ಮದಿ ಯಾಗಿ ಇರೋಣವೆಂದು ಎಲ್ಲ ತಂದೆ-ತಾಯಂದಿರು ಮಕ್ಕಳಿಗೆ ವಿವಾಹ ಮಾಡಿರುತ್ತಾರೆ. ಅದೃಷ್ಟವಶಾತ್ ಒಳ್ಳೆ ಹುಡುಗಿ ಸಿಕ್ಕರೇನು ಪರವಾಗಿಲ್ಲ. ಅವರ ಗ್ರಹಚಾರಕ್ಕೆ ಹುಡುಗಿಗೆ ಮಾನವೀಯತೆ ಎಂಬುದೇ ಇಲ್ಲದಿದ್ದರೆ ಮುಗಿದೇಹೋಯಿತು. ಪ್ರತಿದಿನ ಜಗಳ ಅತ್ತೆ ಮಾವಂದಿರನ್ನು ಸರಿಯಾಗಿ ನೋಡಿಕೊಳ್ಳುವುದೇ ಇಲ್ಲ ಇವರೇಕೆ ಇಲ್ಲಿ ಇರಬೇಕು..? ಇವರು ದಂಡಪಿಂಡ ಇದ್ದಹಾಗೆ, ಇವರನ್ನು ವೃದ್ಧಾಶ್ರಮಕ್ಕೆ ಸೇರಿಸಬಾರದೇ..? ಎಂದು ತನ್ನ ಕೋರಿಕೆಯನ್ನು ಸಲ್ಲಿಸುತ್ತಾಳೆ. ತನ್ನ ಗಂಡ ಏನೋ ತನ್ನ ಹೆಂಡತಿ ಹೊಸದಾಗಿ ಬಂದಿದ್ದಾಳೆ ನಾಳೆ ಸರಿಯಾಗಬಹುದು ಎಂದು ಏನಾದರೂ ಉದಾಸೀನ ಮಾಡಿದರೆ ಮುಗಿದೇಹೋಯಿತು. ತನ್ನ ಗಂಡ ತಾನು ಹೇಳಿದಂತೆ ಕೇಳುತ್ತಿಲ್ಲ ಅತ್ತೆ ಮಾವ ಇರುವ ತನಕ ನಾನು ಬರುವುದಿಲ್ಲ ಎಂದು ಹೇಳಿ ತವರುಮನೆಗೆ ಹೋಗಿಬಿಡುತ್ತಾಳೆ. ನಾನು ಬೇಕು ಅಂದರೆ ಅತ್ತೆ ಮಾವನನ್ನು ಬೇರೆಡೆ ಇಡಿ ಇಲ್ಲದಿದ್ದರೆ ನನಗೆ ವಿಚ್ಛೇಧನ ಕೊಡಿ ಎಂದು ದುಂಬಾಲು ಬೀಳುವ ಅದೆಷ್ಟು ಸೊಸೆಯಂದಿರಿದ್ದಾರೆ. ಆಗ ಮಗನಾದವನು ತಂದೆ ತಾಯಿಯನ್ನು ಬಿಡಲಾರ ಕೊನೆಗೆ ತಂದೆ-ತಾಯಿಯರೇ ಮಗನಿಗೆ ನಾವು ಬೇರೆಡೆ ಇರುತ್ತೇವೆ, ನೀನು ಹೆಂಡತಿ ಜೊತೆ ಸುಖವಾಗಿರು ಎಂದು ಹೇಳಿ ತಾವೇ ಹೊರಡುತ್ತಾರೆ.

ಇನ್ನು ಕೆಲವು ಸಂಸಾರಗಳಲ್ಲಿ ಬರುವ ಸೊಸೆ ಒಳ್ಳೆಯ ಮನಸುಳ್ಳವಳಾಗಿದ್ದರೂ ಕೆಲವರ ಅಮ್ಮಂದಿರು ತಮ್ಮ ಹೆಣ್ಣು ಮಕ್ಕಳಿಗೆ ಬೇರೆ ಇರುವಂತೆ ಹೇಳಿಕೊಡುತ್ತಾರೆ. ಇನ್ನೆಲ್ಲಿ ತಮ್ಮ ಮಗಳು ಅತ್ತೆಮಾವರ ಸೇವೆ ಮಾಡಿ ಸವೆದು ಬಿಡುತ್ತಾಳೋ ಎಂದು ಇಲ್ಲಸಲ್ಲದ ಮಾತುಗಳನ್ನು ಹೇಳಿ ತಂದೆ ತಾಯಿ ಮಗನನ್ನು ಬೇರೆಡೆ ಮಾಡಿಸುತ್ತಾರೆ.

ಈಗಿನ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ ಎಂದರೆ ಯಾರೂ ನಂಬುವುದಿಲ್ಲ. ಮದುವೆಗಾಗಿ ಹೆಣ್ಣನ್ನು ನೋಡಲು ಹೋದರೆ ಹೆಣ್ಣಿನ ತಂದೆ ತಾಯಿಯರು ನಮಗೂ ಮುಂದೆ ವಯಸ್ಸಾಗುತ್ತದೆ ನಾವು ಬೇರೆಯವರ ಆಶ್ರಯದಲ್ಲಿ ಬದುಕಬೇಕಾಗಬಹುದು ಎಂಬುದನ್ನು ಮರೆತು ನಿಮ್ಮ ಮನೆಯಲ್ಲಿ ರಾಹು-ಕೇತುಗಳಿವೆಯಾ..? ಎಂದು ಕೇಳುತ್ತಾರಂತೆ..! ಅಂದರೆ ಹುಡುಗನ ತಂದೆ-ತಾಯಿಗಳ ಎಂದರ್ಥ. ಮದುವೆಗೆ ಮುಂಚೆ ಈ ರೀತಿ ಮನೋಭಾವನೆ ಹೊಂದಿದವರು ಮದುವೆ ಆದ ನಂತರ ಹೇಗಿರಬಹುದು ಎಂಬುದನ್ನು ಊಹಿಸಲು ಸಾಧ್ಯವಿರುವುದಿಲ್ಲ. ಇಂತಹ ಮನೋಭಾವನೆ ಬರಲು ಹೆಣ್ಣಿನ ತಂದೆ-ತಾಯಿಗಳು ಕಾರಣವಾಗುತ್ತಾರೆ. ಅವರು ತಮ್ಮ ಮಕ್ಕಳಿಗೆ ಮೊದಲಿನಿಂದಲೂ ಹಿರಿಯರಿಗೆ ಬಗ್ಗೆ ಗೌರವ ಕಲಿಸಿ ಹಿರಿಯರನ್ನು ಮಾನವೀಯತೆಯಿಂದ ನೋಡಿಕೊಳ್ಳಬೇಕು ಮಾನವೀಯತೆಯ ಅಂದರೆ ನೀವು ಎಲ್ಲರನ್ನೂ ಮನುಷ್ಯರಾಗಿ ನೋಡಿದರೆ ನೀವುಗಳು ಮುಂದೆ ವಯಸ್ಸಾದ ಕಾಲಕ್ಕೆ ನಿಮಗೂ ದೇವರು ಸಹಾಯ ಮಾಡುತ್ತಾನೆ ಎಂಬ ಅನೇಕ ಅತ್ಯುತ್ತಮ ಸಲಹೆ ಹೇಳಿದ್ದರೆ. ಮಕ್ಕಳು ಒಳ್ಳೆಯ ನಾಗರಿಕತೆಯಿಂದ ಬೆಳೆದು ಗುರುಹಿರಿಯರನ್ನು ಕಂಡರೆ ಗೌರವದಿಂದ ಕಾಣುವಂತವರಾಗುತ್ತಾರೆ

ಇದರಲ್ಲಿ ಗಂಡಿನ ದೌರ್ಬಲ್ಯವೂ ಇದೆ. ಏಕೆಂದರೆ ಅವರು ಆ ರೀತಿ ಪ್ರಶ್ನೆಗಳನ್ನು ಕೇಳಿ ಅಷ್ಟು ಅಮಾನವೀಯತೆಯಿಂದ ವರ್ತಿಸಿದಾಗಲೂ ನಿಮ್ಮ ಸಂಬಂಧವೇ ಬೇಡ ಎಂದು ಹೇಳಿ ಬರುವ ಬದಲು ಹುಡುಗಿ ನ ೋ ಡ ಲ ು





ಚೆನ್ನಾಗಿದ್ದಾಳೆಂದು ನನಗೆ ಇಂತಹ ಸ್ಫೂರದ್ರೂಪಿ ಹೆಣ್ಣು ಸಿಗುವುದೇ ಇಲ್ಲಾ ಇವಳೇ ಮೇನಕೆ, ಅಪ್ಸರೆ ಎಂದು ತಿಳಿದು ಮೊದಲು ಮದುವೆಯಾಗಿ ಬಿಡೋಣ, ನಂತರ ನೋಡೋಣ ಎಂದು ಕೆಲವೊಮ್ಮೆ ಸುಳ್ಳು ಹೇಳಿ ಮದುವೆಯಾಗಿ ನಂತರ ಈ ಕಡೆ ಅಪ್ಪ-ಅಮ್ಮನನ್ನು ಬಿಡದೇ ಆ ಕಡೆ ಕಟ್ಟಿಕೊಂಡ ಹೆಂಡತಿಯನ್ನು ಬಿಡದೇ ಕೊನೆಗೆ ವೃದ್ಧಾಶ್ರಮಕ್ಕೆ ತಂದೆ-ತಾಯಿಯನ್ನು ಸೇರಿಸಿದ ಉದಾಹರಣೆಗಳುಂಟು...

ಇನ್ನು ವಿದ್ಯಾವಂತ ಸೊಸೆ ಯಾದರೆ ಪರವಾಗಿಲ್ಲ ಅವಳಿಗೆ ಬದುಕು, ಹೊಂದಾಣಿಕೆ, ಸಹಬಾಳ್ವೆ ಇರುತ್ತದೆಂದು ಪರಿಭಾವಿಸುವುದು ಕೂಡ ಇಂದು ತಪ್ಪಾಗುತ್ತಿದೆ. ಏಕೆಂದರೆ ಎಷ್ಟೋ ವಿದ್ಯಾವಂತ ಸೊಸೆಯಂದಿರು ಕೂಡಾ ಅತ್ತೆ-ಸೊಸೆ ಸಂಬಂಧದ ವಿಚಾರಕ್ಕೆ ಬಂದಾಗ ಮಾತ್ರ ಅವರವರ ವಿದ್ಯೆ ಸಂಸ್ಕಾರಗಳನ್ನು ಗಾಳಿಗೆ ತೂರುತ್ತಿರುವುದು ವಿಷಾದದ ಸಂಗತಿಯಾಗಿದೆ. ಎಂತಹ ವಿಚಿತ್ರವೆಂದರೆ ಅವರಲ್ಲಿ ತನ್ನ ತಾಯಿಗೆ ವಯಸ್ಸಾಗಿದೆ ಎಂದರಿವಾಗುತ್ತದೆ ಅದೇ ರೀತಿ ತನ್ನ ಅತ್ತಿಗೂ ಕೂಡಾ ವಯಸ್ಸಾಗಿದೆ ಎಂಬ ಭಾವನೆ ಬರೋದೇ ಇಲ್ಲ. ಹಾಗಾಗಿ ಸಾಕಷ್ಟು ಸೊಸೆಯಂದಿರು ಅತ್ತೆಯನ್ನು "ಮುದುಕಿ" ಎಂದೂ ತನ್ನ ತಾಯಿಯನ್ನು ಪ್ರೀತಿಯಿಂದ 'ಅಮ್ಮ'ಎಂದು ಕರೆಯುವ ಸಣ್ಣತನದ ಪ್ರವೃತ್ತಿಯನ್ನು ಪ್ರದರ್ಶಿಸುತ್ತಾರೆ. ಅಲ್ಲದೆ ತನ್ನ ಅಪ್ಪ ಅಮ್ಮಂದಿರನ್ನು ಚೆನ್ನಾಗಿ ನೋಡಿಕೊಳ್ಳಲು ತನ್ನ ತಮ್ಮನಿಗೋ ಅಥವಾ ಅಣ್ಣನಿಗೋ ಒಬ್ಬ ಸಂಸ್ಕಾರವಂತ ಹೆಣ್ಣನ್ನು ಹುಡುಕುವ ಸೊಸೆಯೇಕೆ ತನ್ನ ಅತ್ತೆ ಮಾವಂದಿರರಿಗೆ ಆದರ್ಶ ಸೊಸೆ ಯಾಗುತ್ತಿಲ್ಲ..? ಎಂಬ ಪ್ರಶ್ನೆಗೂ ಸಹ ಅವರಿಂದ ಉತ್ತರ ದೊರೆಯುವುದೇ ಇಲ್ಲಾ.. ಇಂತಹ ಸ್ವಾರ್ಥ ಭಾವನೆಯಿಂದ ಸಂಬಂಧಗಳು ಮತ್ತಷ್ಟು ಹಳಸುವುದರ ಜೊತೆಗೆ ಇಲ್ಲಿ ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು. ನಾವಿಂದು ಹೇಗೆ ತಂದೆ-ತಾಯಿಗೆ ಅತ್ತೆ ಮಾವಂದಿರರೊಂದಿಗೆ ವರ್ತಿಸುತ್ತೇವೆ ಎಂಬುದನ್ನು ಮಕ್ಕಳು ಸಂಪೂರ್ಣ ನಕಲು ಮಾಡುತ್ತಾರೆ ಮತ್ತೆ ಅದೇ ಸಂಸ್ಕಾರವನ್ನು ಮರಳಿ ನೀಡುತ್ತಾರೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು..!

ಇನ್ನುವಯಸ್ಸಾದ ಮಾತ್ರಕ್ಕೆ ಎಲ್ಲ ಹಿರಿಯರು ಒಳ್ಳೆಯವರಾಗಿರುತ್ತಾರೆ ಎಂದು ಹೇಳಲಾಗದು. ಹಾಗೆಯೇ ಎಲ್ಲಾ ಸೊಸೆಯಂದಿರೂ ಪ್ರೀತಿ ತೋರುವುದಿಲ್ಲವೆಂದು ಹೇಳಲಾಗದು. ಈ ಸಂಸಾರಿಕ ಸಂಘರ್ಷಕ್ಕೆ ಅದೆಷ್ಟೋ ಹಿರಿಯರು ಕೂಡಾ ಕಾರಣರಾಗುತ್ತಾರೆ. ತಮ್ಮ ಹಠಮಾರಿ ಧೋರಣೆಯಿಂದ ತಾವು ಹೇಳಿದಂತೆಯೇ ನಡೆಯಬೇಕು ಎಂದು ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳದೇ, ಎಲ್ಲವನ್ನು ತಮ್ಮ ಕಾಲಕ್ಕೆ ತೆಗೆದುಕೊಂಡು ಹೋಗಿ ಅಳೆದು-ತೂಗಿ ಗುಣಿಸಿ ಭಾಗಿಸಿ ಯೋಜಿಸಲು ಹೋಗಿ ಹಲವಾರು ಅವಾಂತರಗಳನ್ನು ಸೃಷ್ಟಿಸುವುದನ್ನು ಸಹಜ.

ಆದರೆ ಆ ವಯಸ್ಸಿನಲ್ಲಿ ಬೈದು ಒಮ್ಮೆಲೆ ಅವರನ್ನು ಸರಿಮಾಡಲು ಹೋಗೋ ಬದಲು ಅವರೊಂದಿಗೆ ಸಂಯಮದಿಂದ ಇರುವುದು ಒಳಿತು. ಏಕೆಂದರೆ ಮೊದಲೇ ವೃದ್ಧಾಪ್ಯವು ಅವರನ್ನು ಹಲವು ಬಗೆಯಲ್ಲಿ ಬಾಧಿಸಿ ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಒದ್ದಾಡುತ್ತಿರುವುದರಿಂದ ಈ ಸಂದರ್ಭದಲ್ಲಿ ಅವರನ್ನು ಸಂಪೂರ್ಣವಾಗಿ ತಳ್ಳಿಹಾಕಿ ಬದಲಿಸಲು ಹೋದರೆ ಅವರು ತಮ್ಮ ಅನುಭವ ಮತ್ತು ಹಿರಿತನಕ್ಕೆ ಇಲ್ಲಿ ಯಾವುದೇ ಮನ್ನಣೆ ಇಲ್ಲವೆಂದು ಮತ್ತಷ್ಟು ಜರ್ಜರಿತರಾಗಿ ಖಿನ್ನತೆಗೆ ಒಳಗಾಗಬಹುದು..! ಮತ್ತೆ ಇಲ್ಲಿ ಪ್ರತಿಯೊಬ್ಬರೂ ಒಂದು ವಿಷಯವನ್ನು ಮನಗಾಣಲೇಬೇಕು ಅವರು ಆ ಮನೆಯಲ್ಲಿ ಮೊದಲೇ ಹುಟ್ಟಿದವರು ಅವರ ಆಚಾರ -ವಿಚಾರ ಸಂಪ್ರದಾಯಗಳು ಮೊದಲೇ ಹುಟ್ಟಿದಂತವುಗಳು. ಅಷ್ಟಕ್ಕೂ ಅವರೇ ಕಟ್ಟಿಕೊಂಡ ಮನೆ, ನೆರೆಹೊರೆ, ಬದುಕಿನ ಸಂಸ್ಕಾರಗಳನ್ನು ಬೇರೆಯವರಿಚ್ಛೆಯಂತೆ ಸಂಪೂರ್ಣ ಬದಲಿಸಲು ಇತರರಿಗೆ ಯಾವ ಅಧಿಕಾರವಿದೆ ಹೇಳಿ....?

ತಾನು ತಿನ್ನದೆ ಮಗುವಿಗೆ ಸಿಹಿತಿಂಡಿ ತರುವ ತಾಯಿ. ಮಗನನ್ನು ಹೆಗಲಮೇಲೆ ಹೊತ್ತು ಸಂತೆ ಸುತ್ತಿಸಿದ ಅಪ್ಪ, 'ಅಮ್ಮಾ ನನಗೆ ಹೊಟ್ಟೆ ನೋವು ಅಂದಾಗ ಅದನ್ನು ನಾನಾದರೂ ತೆಗೆದುಕೊಳ್ಳುವಂತಿರ ಬಾರದಿತ್ತೆ'..? ಎಂದು ಕಣ್ಣೀರಿಡುವ ಅಮ್ಮ. ಹೀಗೆ ಒಂದೇ... ಎರಡೇ... ಬಾಳಿನಲ್ಲಿ ಏನೆಲ್ಲ ಕಷ್ಟ-ಸುಖ, ಆಗಮನ –ಅಗಲಿಕೆ ಏರಿಳಿತಗಳನ್ನು ಸ್ಥಿತಪ್ರಜ್ಞರಾಗಿ ಸಹಿಸಿಕೊಂಡ ಅರವತ್ತೈದು ಮತ್ತೊಂದಿಷ್ಟು ಮಳೆಗಾಲವನ್ನು ಕಂಡು ಮಾಗಿದ ಮನಸುಗಳು ಕೊನೆಯಲ್ಲಿ ಕನಸುಗಳ ಒಟ್ಟಿಗೆ ಬದುಕುವ ಬದಲು ಭಯದೊಟ್ಟಿಗೆ ಬದುಕಿದರೆ ಹೇಗಾದೀತು ..? ಅದಕ್ಕಾಗಿ ಹೆತ್ತವರಿಗೆ ಅವರದೇ ಆದ ಸಂತೋಷಗಳಿವೆ ಅದನ್ನು ಅವರು ನಮಗೋಸ್ಕರ ತ್ಯಾಗ ಮಾಡಿದ್ದನ್ನು ನೆನೆದು ಅವರನ್ನು ಸಂತೋಷಪಡಿಸಬೇಕು.

ತಿಳಿದೋ, ಅಥವಾ ತಿಳಿಯದೋ ಕೊನೆಗಾಲದಲ್ಲಿ ಎದೆಯುದ್ದ ಬೆಳೆದ ಮಕ್ಕಳು ಅಪ್ಪ ಅಮ್ಮರಿಗೆ ಮರುತ್ತರ ಕೊಡುವಾಗ ಅವರ ಕಣ್ಣುಗಳನ್ನೊಮ್ಮೆ ನೋಡಿ ಸಾಕು. ಸಾಗರದಷ್ಟು ದುಃಖವನ್ನು ಮನಸ್ಸಿನಲ್ಲಿಟ್ಟುಕೊಂಡು ಅಭಿಮಾನದಿಂದಲೇ ತಲೆ ಎತ್ತಿ ನಡೆಯುವ ಅವರ ಸಹನೆ ಮತ್ತು ಗೌರವವನ್ನು ತಿಳಿಯಬೇಕಾದರೆ ಪ್ರತಿ ಮಗ ಸೊಸೆನೂ ಕೂಡಾ ತಂದೆ-ತಾಯಿ ಆಗಬೇಕು..!

ಹಾಗಾಗಿ ಅವರನ್ನು ಅರ್ಥಮಾಡಿಕೊಂಡು ಸರಿಯಾಗಿ ನೋಡಿಕೊಳ್ಳದಿದ್ದರೆ ಅವರು ತೀರಿದಮೇಲೆ ಅವರು ಮಾಡಿದ್ದೆಲ್ಲವನ್ನೂ ನೆನೆದು ಪಶ್ಚಾತಾಪ ಪಡುವ ಹೊತ್ತಿನಲ್ಲಿ ಅಪ್ಪ-ಅಮ್ಮ ಕಾಣದ ಲೋಕಕ್ಕೆ ಹೊರಟು ಹೋಗಿರುತ್ತಾರೆ. ಬೊಬ್ಬಿಟ್ಟು ಕೂಗಿದರು ಕೇಳಿದ ಕಿವಿಯಾಗಿ... ಆದ್ದರಿಂದ ಫಲ ಕೊಡುವ ಮರ ಕೊಡುವಿಕೆ ಯನ್ನು ನಿಲ್ಲಿಸಿದಾಗ ಅದಕ್ಕೆ ನೀರೆರೆಯುವುದನ್ನು ನಿಲ್ಲಿಸುವುದು ಎಷ್ಟು ಸರಿ..? ಕನಿಷ್ಠ ಅದು ನೀಡುವ ನೆರಳನ್ನಾದರೂ ಸ್ಮರಿಸಬೇಕಲ್ಲವೇ..?

ನಮ್ಮ ಮಕ್ಕಳು ಎರಡು ಕೇಳಿದರೆ ನಾಲ್ಕು ಕೊಡಿಸುವ ನಾವು ನಮಗಾಗಿಯೇ ಜೀವ ತೇಯ್ದಿರುವ ವಯಸ್ಸಾದ ಅಪ್ಪ-ಅಮ್ಮಂದಿರು ಅಷ್ಟಕ್ಕೂ ನಮ್ಮನ್ನು ಕೇಳುವುದಾದರೂ ಏನು..? ಎರಡು ಹೊತ್ತಿಗೆ ಹಿಡಿ ಅನ್ನ, ಚೂರು ಪ್ರೀತಿಯನ್ನೆಲ್ಲದೆ ಇನ್ನೇನು ಬಯಸುತ್ತಾರೆ ಹೇಳಿ..? ಬಾಲ್ಯದಲ್ಲಿ ನಮ್ಮ ಅದೆಷ್ಟೋ ಮುಗ್ಧ ಪ್ರಶ್ನೆಗಳಿಗಳಿಗೆ ಬೇಸರಿಸಿಕೊಳ್ಳದೇ ಇಡೀ ದಿನ ಉತ್ತರಿಸುತ್ತಿದ್ದ ಅವರ ಜೊತೆ ಎರಡು ಮಾತನಾಡೋಣ ನಮ್ಮ ನಾಳೆಯ ವೃದ್ಧಾಪ್ಯವನ್ನೊಮ್ಮೆ ನೆನೆದು...!!



– **ಹೊನ್ನಪ್ಪ.ಕರೆಕನ್ನಮ್ಮನವರ**
**ತಿರುಮಲಕೊಪ್ಪ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಜ್ಞಾನವೇ ಶಕ್ತಿ
ಮನಸ್ಸು ಮಾಡು | ಕರ್ತವ್ಯ ನಿಷ್ಠನಾಗು ಕಾದು ನೋಡು
ಶಿಕ್ಷಣವು ಕರಗದ ಸಂಪತ್ತು
ಮಕ್ಕಳ ಕೈಗೆ ದಿನಪತ್ರಿಕೆ ನೀಡಿ
ಹಂಪಿ ಟೈಮ್ಸ್ ಮಾರ್ಗದರ್ಶಿ ಪ್ರತಿದಿನ ಓದಿ, ನಿಮ್ಮ ಜ್ಞಾನ ಸಂಪತ್ತನ್ನು ಇಮ್ಮಡಿಗೊಳಿಸಿ,
ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಗರಿಷ್ಠ ಫಲಿತಾಂಶ ನಿಮ್ಮದಾಗಲಿ...
ವಿದ್ಯಾರ್ಥಿಗಳೇ ಶಾಲೆಗೊಂದು 625 ಗುರಿ ನಿಮ್ಮದಾಗಲಿ, ಹಂಪಿ ಟೈಮ್ಸ್ ಮಾರ್ಗದರ್ಶಿ ನಿತ್ಯ ಓದಿ ಬರೆದಿಟ್ಟುಕೊಳ್ಳಿ
ನಿಮಗಾಗಿ ದಿನವೂ ಪ್ರಶ್ನೋತ್ತರ | ಪ್ರತಿ ಭಾನುವಾರ ಪಠ್ಯಾಧಾರಿತ ಪದಸ್ಫೂರ್ತಿ ಮತ್ತು ಕನ್ನಡ ವ್ಯಾಕರಣ
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com

**ಕವಿ ಮನಸು**

## ನೋವಿನ ಪೆಟ್ಟು

ಹಳೆ ಮಾಸಿದ ಬಟ್ಟೆಯಿಂದ,
ಎನ್ನ ಮೈ ಮಾಸ ಒರೆಸಿದರು.
ನೀರೆರೆದು ಹಳೆಯ ಹರಕು
ಸೀರೆಯ ತೊಟ್ಟಿಲ ಕಟ್ಟಿದರು.

ಕಂಡ ಕಂಡವರೆಲ್ಲ ಬಂದು,
ನಸು ನಕ್ಕು ಹೊಗಳಿದರು.
ಸಂಬಂಧಗಳ ಸರಮಾಲೆ ಹಾಕಿ,
ಈ ಉಸಿರಿಗೆ ಹೆಸರು ಕೊಟ್ಟರು.

ಏನೂ ತಿಳಿಯದ ನನಗೆ,
ಚಲುವೆ ಚಂದುಳ್ಳಿಯೆಂದು
ಹೊಗಳುತ್ತ, ತೆಗಳುತ್ತ,
ದುಡಿತ ಹಚ್ಚಿದರು ಬೆಳೆಸುತ್ತ.

ಹದಿಹರೆಯದಿ ಕಲಿವಾಸೆಗೆ,
ತಗಲಿದ ನಿರಾಸೆಯ ಬೆಂಕಿ.
ಹೆತ್ತವರ ಋಣಕೆ ಸೋತು
ಹತ್ತಿಕ್ಕಿ ಬಚ್ಚಿಟ್ಟ ಆಶೆಗಳ ಕಂತೆ.

ಸತ್ಯ ಸಾತ್ವಿಕರೆಲ್ಲ ಬಹುದೂರ.
ಕಾಮುಕರಿಗಿಲ್ಲ ಸರಿ ನೋಟ
ನೋವಲ್ಲಿಯೇ ಸಾಗಿಹುದೆನ್ನ
ಸತ್ತಿರುವ ನೈಜ ಬದುಕಿನ ಓಟ.

ಕಾಪಾಡಲು ಎಷ್ಟೇ ಪ್ರಯತ್ನ ಪಟ್ಟೆ,
ಹರಿದೋಯಿತು ಉಟ್ಟಿರುವ ಬಟ್ಟೆ.
ಪಟ್ಟ ನೋವಿನಲಿ ಕಣ್ಮುಚ್ಚಿ ಬಿಟ್ಟೆ.
ಉಳಿದುದೆಲ್ಲ, ಸೃಷ್ಟಿ ಕರ್ತನಿಗೆ ಬಿಟ್ಟೆ.

– ಲಕುಮಿಸುತ ಸಾರವಾಡ

## ವಸುದೇವ ಸುತ

ವಸುದೇವ ಸುತನಾಗಿ,
ವಸುಧೆಯೊಳು ಜನಿಸಿದ.
ವಾಸುದೇವನೆ ತಾನಾಗಿ
ವಸುಂಧರೆಯ ವರಿಸಿದ.

ದಶರಥನ ಪುತ್ರನಾಗಿ,
ದಟ್ಟ ಅಡವಿಯನ್ನು ಸೇರಿದ.
ದಾನವೇಂದ್ರ ದಶಕಂಠನ,
ಧರಣಿಯೊಳು ಮದಿಸಿದ.

ಬಲಿತು ಬರಿದೆ ಮೆರೆಯುತ್ತಿದ್ದ,
ಬಲಿಯಲ್ಲಿ ದಾನವ ಬೇಡಿದ.
ಬಲಗಾಲನಿಟ್ಟು ಧರೆಯ ಅಳೆದು,
ಬಲಿಂದ್ರನನ್ನು ತಾ ಉದ್ಧರಿಸಿದ.

ಕರವ ಮುಗಿದು ಬೇಡಿದವರ
ಕಾಪಾಡುವ ಕರುಣಾಕರ.
ಕಷ್ಟಗಳ ನೀಗಿಸಿ ಕೈ ಹಿಡಿದು,
ಪೊರೆಯೋ ಹೇ ಮನೋಹರ.

– ಮಮತಾ ಶೃಂಗೇರಿ

## ಬಿರುಗಾಳಿ

ಮುಸ್ಸಂಜೆಯ ಸಮಯದಿ
ಗಾಳಿ ಬೀಸಲು
ಹಿತವದು ಮೈ ಮನಕೆ
ಇರಲಿ ನಮ್ಮ ಮಾತು
ತಂಗಾಳಿಯಂತೆ
ಕೇಳಲದು ಹಿತವು ಪರರ ಕಿವಿಗೆ

ಬಿರುಗಾಳಿ ಬೀಸಲು
ಮರ ಗಿಡಗಳು
ಉರುಳುವುದು ಧರೆಗೆ
ಬಿರುಸು ಮಾತಿನಿಂದ
ಒಡೆಯುವುದು ಮನಸ್ಸು

ನಿಸರ್ಗದ ವಿಕೋಪದಿಂದ
ಜನ ಜೀವನ ಅಸ್ತವ್ಯಸ್ತ
ಪರಸ್ಪರ ಜಗಳಗಳಿಂದ
ದೂರವಾಗುವುದು ಸಂಬಂಧ.

– ಸುವರ್ಣಾ ಭಟ್ಟ

# ದೈಹಿಕ ಅಂಗವಿಕಲತೆಗೆ ಅತೀತನಾದ ವಿಜ್ಞಾನಿ... ಸ್ಟೀಫನ್ ಹಾಕಿಂಗ್




1942ರ ಜನವರಿ 8ರಂದು ಜನಿಸಿದ ಸ್ಟೀಫನ್ ಎಲ್ಲರಂತೆ ಸಾಮಾನ್ಯವಾದ ಓರ್ವ ಮನುಷ್ಯನಾಗಿದ್ದ. ಆಕ್ಸಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ಗಣಿತ ಮತ್ತು ಭೌತವಿಜ್ಞಾನ ವಿಷಯಗಳಲ್ಲಿ ಪದವಿಯನ್ನು ಪಡೆದರು. ಅಧ್ಯಯನ ಮಾಡಿದರು. ಮುಂದೆ ಬ್ರಹ್ಮಾಂಡದ ಕುರಿತಾದ ಕಾಸ್ಮೋಲಜಿ (ವಿಶ್ವವಿಜ್ಞಾನ) ಯಲ್ಲಿ ಇವರ ಆಸಕ್ತಿ ಹೆಚ್ಚಿತು. ಬೃಹತ್ ಬ್ರಹ್ಮಾಂಡದ ಹುಟ್ಟು ಸಾವುಗಳ ಕುರಿತು ವಿಶೇಷ ಆಸಕ್ತಿಯನ್ನು ವಹಿಸಿದ ಆತ ಭೌತ ವಿಜ್ಞಾನ ಮತ್ತು ವಿಶ್ವ ವಿಜ್ಞಾನಗಳಲ್ಲಿ ಅಧ್ಯಯನ ಮಾಡಿದರು.

ಈ ಸಮಯದಲ್ಲಿಯೇ ಆತನಿಗೆ ದೈಹಿಕವಾಗಿ ಅಸ್ವಸ್ಥತೆ ಕಾಡತೊಡಗಿತ್ತು. ಹಲವಾರು ವೈದ್ಯರ ಬಳಿ ಎಡತಾಕಿದ ಅವರಿಗೆ ವೈದ್ಯರು ಎಲ್ಲ ರೀತಿಯ ಪರೀಕ್ಷೆಗಳನ್ನು ಮಾಡಿ ಆತನಿಗೆ ಕೇವಲ ಎರಡು ವರ್ಷಗಳ ಕಾಲಾವಕಾಶ ಇದೆ ಎಂದು ಹೇಳಿದರು. ಈ ಎರಡು ವರ್ಷಗಳಲ್ಲಿ ಆತ ಬದುಕಿನ ಆಸೆಯನ್ನು ಬಿಡಬೇಕು ಎಂದು ಕೂಡ.

ಕೇವಲ 21 ವರ್ಷ ವಯಸ್ಸಿನ ಆತನಿಗೆ ಮಾಡಿದ ಪರೀಕ್ಷೆಯಿಂದ ಆತನ ಜೀವನ ಎರಡು ಹೋಳಾಗಿತ್ತು ಎಎಲ್ಎಸ್ (ಅಮಿಯೋ ಟ್ರೋಫಿಕ್ ಲ್ಯಾಟರಲ್ ಸ್ಥಿರೋಸಿಸ್ ). ಆತ ನಿಧಾನವಾಗಿ ತನ್ನ ದೇಹದ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ ಎಂದು ವೈದ್ಯರು ಆತನನ್ನು ಎಚ್ಚರಿಸಿದರು. ವೈದ್ಯರು ಹೇಳಿದಂತೆ ಆತ ನಿಧಾನವಾಗಿ ನಡೆಯುವ ಶಕ್ತಿಯನ್ನು ಕಳೆದುಕೊಂಡ ಆತನ ವಾಕಶಕ್ತಿಯು ಕೂಡ ಹೊರಟು ಹೋಗಿ ಮಾತನಾಡುವುದು ಕೂಡ ನಿಂತು ಹೋಯಿತು. ಬರ ಬರುತ್ತಾ ಪರಿಸ್ಥಿತಿ ಮತ್ತಷ್ಟು ಕ್ಲಿಷ್ಟವಾಯಿತು.. ಇದೀಗ ಯಂತ್ರಗಳ ಸಹಾಯವಿಲ್ಲದೆ ಆತನಿಗೆ ಉಸಿರಾಡುವುದು ಕೂಡ ಕಷ್ಟವಾಯಿತು. ಬದುಕು ಸಂಪೂರ್ಣ ಅಂಧಕಾರದತ್ತ ಕೊಂಡೊಯ್ದಿತ್ತು . ಎಷ್ಟೋ ದಿನಗಳ ಕಾಲ ಆತ ಒಂಟಿಯಾಗಿ ತನ್ನ ಪರಿಸ್ಥಿತಿಗಾಗಿ ವಿಧಿಯನ್ನು ಹಳಿಯುತ್ತಾ ಕಾಲ ಕಳೆದಿದ್ದ. ಭವಿಷ್ಯದ ಕುರಿತು ಭವ್ಯವಾದ ಕನಸುಗಳನ್ನು ಕಂಡ ಆತ ಸಂಪೂರ್ಣ ಸೋತು ಹೋದಂತೆ ತೋರುತ್ತಿದ್ದ. ವಿಜ್ಞಾನಿಯಾಗುವ ಆತನ ಕನಸು ಸಂಪೂರ್ಣ ನಾಶವಾಯಿತು ಎಂದೇ ಆತ ಭಾವಿಸುವಂತಹ ಸಮಯವದು.

ಇಷ್ಟೆಲ್ಲಾ ಆದರೂ ಮನಸ್ಸಿನ ಯಾವುದೋ ಒಂದು ಒಳ ಮೂಲೆಯಲ್ಲಿ ಸೋಲನ್ನು ಒಪ್ಪಿಕೊಳ್ಳದ ಮನಸ್ಥಿತಿ ಆತನದಾಗಿತ್ತು. ಬದುಕಿನಲ್ಲಿ ಏನನ್ನಾದರೂ ಸಾಧಿಸುವ ಆಸೆಯನ್ನು ಕೈಬಿಡುವುದು ತನ್ನಿಂದ ಸಾಧ್ಯವಿಲ್ಲ ಎಂಬುದು ಆತನ ಅಂತರಂಗದ ದನಿಯಾಗಿತ್ತು.

ಕ್ಷೀಣಿಸುತ್ತಲೇ ಹೋದ ಆತನ ದೇಹ ಒಂದೆಡೆ ಆದರೆ ಆ ದೇಹದೊಳಗಿನ ಬುದ್ಧಿಶಕ್ತಿ ಮಾತ್ರ ಜೋರಾಗಿ ಘರ್ಜಿಸಲು ಸಿದ್ಧವಾಗುತ್ತಿತ್ತು. ದೈಹಿಕವಾಗಿ ತನ್ನೆಲ್ಲ ಅಂಗಗಳ ಕಾರ್ಯಕ್ಷಮತೆಯನ್ನು ಕಳೆದುಕೊಂಡಿದ್ದ ಆತನಲ್ಲಿ ಉಳಿದದ್ದು ಆತನ ಅತೀವ ಬುದ್ಧಿ ಶಕ್ತಿ ಮತ್ತು ಬದುಕಿನ ಮೇಲೆ ಅಪಾರ ಭರವಸೆ. ಆತನ ಎಲುಬುಗಳು ಸವಕಳಿಯಾದಂತೆ ಆತನ ಕುತೂಹಲ ಗಟ್ಟಿಯಾಗತೊಡಗಿತು. ವಿಶೇಷ ಅಧ್ಯಯನ ಮತ್ತು ಸಂಶೋಧನೆಯಲ್ಲಿ ನಿರತನಾಗಿದ್ದ ಸ್ಟೀಫನ್ ಹಾಕಿಂಗರನ್ನು ದೈಹಿಕ ನೋವುಗಳು ಹಿಂಡಿ ಹಿಪ್ಪೆ ಮಾಡುತ್ತಿದ್ದವು. ವೈದ್ಯರ ವರದಿ ಬಂದ ಮೇಲಂತೂ ಅವರು ಮತ್ತಷ್ಟು ಕುಸಿದು ಹೋದರು. ಅವರ ಮುಂದೆ ಇದ್ದುದು ಕೇವಲ ಎರಡು ಆಯ್ಕೆಗಳು. ತನ್ನ ದೈಹಿಕ ನೋವುಗಳನ್ನು ಅನುಭವಿಸುತ್ತಾ ಸಾವನ್ನು ಎದುರು ನೋಡುವುದು ಒಂದೆಡೆಯಾದರೆ ತನ್ನೆಲ್ಲ ದೈಹಿಕ ನೋವುಗಳನ್ನು ಅಲಕ್ಷಿಸಿ ಸಂಶೋಧನೆಯಲ್ಲಿ ತೊಡಗಿಕೊಂಡು ಇರುವಷ್ಟು ಸಮಯವನ್ನು ಅರ್ಥಪೂರ್ಣವಾಗಿ ಕಳೆಯುವುದು ಮತ್ತು ವೈಜ್ಞಾನಿಕ ಆವಿಷ್ಕಾರದ ಲಾಭವನ್ನು ಜಗತ್ತಿಗೆ ನೀಡುವುದು. ಸ್ಟೀಫನ್ ಎರಡನೇ ಆಯ್ಕೆಯನ್ನು ತಮ್ಮದಾಗಿಸಿಕೊಂಡರು.

ತನ್ನೆಲ್ಲ ದೈಹಿಕ ನೋವು, ತೊಂದರೆ ಮತ್ತು ಅದರಿಂದ ಉಂಟಾಗುವ ನಿರಾಶೆಗಳನ್ನು ಮರೆಯಲು ಆತ ಒಂದೇ ಸಮನೆ ಓದಲಾರಂಭಿಸಿದರು. ತನ್ನ ದೇಹಕ್ಕೆ ಅಳವಡಿಸಲಾಗಿದ್ದ ಕಂಪ್ಯೂಟರ್‌ನ ಮೂಲಕ ಮಾತನಾಡಲಾರಂಭಿಸಿದರು... ತನ್ನ ಸಂಪೂರ್ಣ ದೇಹ ನಿಷ್ಕ್ರಿಯವಾಗಿ ತನ್ನ ಕೈಯ ಒಂದು ಬೆರಳನ್ನು ಚಲಿಸುವುದು ಕೂಡ ಅತ್ಯಂತ ಸಾಹಸದ ವಿಷಯವಾದ ಸಮಯದಲ್ಲಿಯೂ ಕೂಡ ಆತ ಮಾತನಾಡುತ್ತಲೇ ಹೋದ. ಆತನ ಕಾಲುಗಳಿಗೆ ನಡೆಯುವ ಶಕ್ತಿ ಇರಲಿಲ್ಲ ನಿಜ ಆದರೆ ಆತನ ಯೋಚನೆಗಳು ಇಡೀ ಬ್ರಹ್ಮಾಂಡವನ್ನು ಸುತ್ತು ಹಾಕಲಾರಂಬಿಸಿದವು

ವಿಜ್ಞಾನದ ಹಲವಾರು ಪುಸ್ತಕಗಳನ್ನು ಆತ ಬರೆದರು... ಬುದ್ಧಿಜೀವಿಗಳ ವಿಚಾರವಂತರ ವೈಜ್ಞಾನಿಕ ಆವಿಷ್ಕಾರ ಮಾಡುತ್ತಿರುವ ಸಂಶೋಧನಾರ್ಥಿಗಳ ತುಂಬಿದ ಸಭೆಗಳಲ್ಲಿ ಆತ ಉಪನ್ಯಾಸಗಳನ್ನು ನೀಡಿದ ನಾನು ವೀಲ್ ಚೇರಿನಲ್ಲಿ ಕುಳಿತುಕೊಂಡೇ ವಿಜ್ಞಾನವನ್ನು ಕೋಟ್ಯಂತರ ಮನೆಗಳ ಆವರಣಕ್ಕೆ ತಂದುಕೊಟ್ಟ. ಆತನ ಮನದಲ್ಲಿ ಎಂದೂ ಆರಲಾರದ ಒಂದು ಪುಟ್ಟ ಅಗ್ನಿ ಜ್ವಲಿಸುತ್ತಿತ್ತು. ಆತನಿಗೆ ಒಂದು ಸತ್ಯದ ಅರಿವಾಗಿತ್ತು. ನೀವೇನೂ ಮಾಡಲಾರಿರಿ ಎಂಬುದನ್ನು ಹಿಂದಿಕ್ಕಿ ನೀವೇನು ಮಾಡಬೇಕು ಎಂಬುದನ್ನು ಆಯ್ದುಕೊಳ್ಳುವ ಹಕ್ಕು ನಿಮಗಿದ್ದೇ ಇದೆ ..ಮತ್ತು ನೀವು ಏನು ಮಾಡದೆ ಉಳಿಸಿಬಿಟ್ಟಿರುವಿರೋ ಅದನ್ನು ಕೂಡ ಮಾಡುವ ಛಲ ನಿಮ್ಮಲ್ಲಿ ಇರಲೇಬೇಕು ಎಂಬುದು ಆತನ ಸಿದ್ಧಾಂತವಾಗಿತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆತನ ದೈಹಿಕ ಶಕ್ತಿ ಕ್ಷೀಣಿಸುತ್ತದೆ ಎಂಬುದು ಗೊತ್ತಿರುವ ಮುನ್ನವೇ ಆತನಿಗೆ ಜೇನ್ ಎಂಬ ಸ್ನೇಹಿತೆ ಇದ್ದಳು. ನಂತರವೂ ಆಕೆ ಆತನ ಕೈಬಿಡಲಿಲ್ಲ. ಆತನ ಜೀವನ ಸಂಗಾತಿಯಾಗಿ ಮುಂದಿನ 30 ವರ್ಷಗಳ ಕಾಲ ಆಕೆ ಆತನೊಂದಿಗೆ ತನ್ನ ಜೀವನವನ್ನು ಹಂಚಿಕೊಂಡಳು. ಆತನ ದೈಹಿಕ ಶಕ್ತಿ ಕ್ಷೀಣಿಸಿದ ನಂತರ ಆಕೆ ಆತನನ್ನು ವಿವಾಹವಾಗಿ ಅದ್ಭುತ ವೈವಾಹಿಕ ಜೀವನವನ್ನು ನಡೆಸಿ ಮೂರು ಮಕ್ಕಳನ್ನು ಪಡೆದಳು. ಆತನಿಗೆ ತಾಯಿಯಾಗಿ ಮಗುವಿನಂತೆ ನೋಡಿಕೊಂಡಳು. ಆತನನ್ನು ತನ್ನೆರಡೂ ಕೈಗಳ ಬಲದಿಂದ ಎತ್ತಿ ಬಚ್ಚಲಿಗೆ ಕರೆದೊಯ್ಯುವುದರಿಂದ ಹಿಡಿದು ಆತನ ಊಟ ಉಪಚಾರಗಳ ಜವಾಬ್ದಾರಿಯನ್ನು ನಿರ್ವಹಿಸಿದಳು. ಯಾವುದೇ ಹೇಸಿಗೆ ಇಲ್ಲದೆ ಆತನ ಪರಿಚಾರಕಳಾಗಿ ಕಾರ್ಯನಿರ್ವಹಿಸಿದಳು. ಆಕೆಯ ನಿಸ್ವಾರ್ಥ ಸೇವೆ, ಮಾನಸಿಕ ಬೆಂಬಲ, ಚೇತೋಹಾರಿ ಮಾತುಗಳು ಆತನ ಜೀವನೋತ್ಸಾಹವನ್ನು ಬಡಿದೆಬ್ಬಿಸಿದವು.

ಐಸಾಕ್ ನ್ಯೂಟನ್ ಅವರು ವಹಿಸಿದ್ದ ಲ್ಯೂಕೇಶಿಯನ್ ಪ್ರಾಧ್ಯಾಪಕ ಪೀಠಾಧ್ಯಕ್ಷ ಪದವಿಯನ್ನು ಅಲಂಕರಿಸಿದ ಹಾಕಿಂಗ್ ಕೇಂಬ್ರಿಜ್ ವಿಶ್ವವಿದ್ಯಾಲಯ ದಲ್ಲಿ ವಿಶ್ವ ಭೌತವಿಜ್ಞಾನದ ಪ್ರಾಧ್ಯಾಪಕರಾಗಿ ನಿಯುಕ್ತರಾದರು. ತಮ್ಮ ಕೈಗೆ ಅಳವಡಿಸಿರುವ ಕಂಪ್ಯೂಟರ್ ನ ಮೂಲಕ ತರಗತಿ ಕೋಣೆಯ ವೈಜ್ಞಾನಿಕ ಉಪನ್ಯಾಸಗಳ ಜೊತೆ ಜೊತೆಗೆ ಅವರು ವೈಜ್ಞಾನಿಕ ಲೇಖನಗಳನ್ನು ಕೃತಿಗಳನ್ನು ರಚಿಸಿದರು.

'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್'', 'ದ ಲಾರ್ಜ್ ಸ್ಕೇಲ್ ಸ್ಟ್ರಕ್ಚರ್ ಆಫ್ ಸ್ಪೇಸ್ ಟೈಮ್', ಸಾಸರ್ ಸ್ಟಾರ್ ಅಂಡ್ ಸೂಪರ್ ಗ್ರಾವಿಟಿ, ಬ್ಲಾಕ್ ಹೋಲ್ ಅಂಡ್ ಬೇಬಿ ಯೂನಿವರ್ಸ್ ಎಂಬ ಸಾರ್ವಕಾಲಿಕವಾದ ವೈಜ್ಞಾನಿಕವಾಗಿ ಅತ್ಯಮೂಲ್ಯವೆಂದು ಪರಿಗಣಿಸಲ್ಪಟ್ಟಿರುವ ಕೃತಿಗಳನ್ನು ಅವರು ರಚಿಸಿದರು.

ಖ ಭೌತ ವಿಜ್ಞಾನದಲ್ಲಿ ಇವರು ಕಪ್ಪು ಕುಳಿಗಳು ಮತ್ತು ಬ್ರಹ್ಮಾಂಡದ ಕುರಿತಾದ ವಿಶೇಷ ಅಧ್ಯಯನ ಮಾಡಿ ಕಪ್ಪುಕುಳಿಗಳು ಸಂಪೂರ್ಣವಾಗಿ ಕಪ್ಪು ಕಣಗಳಲ್ಲ ಅವು ವಿಶೇಷ ವಾದ ತರಂಗ ಚಲನದ ಮೂಲಕ ಕಪ್ಪು ಕುಳಿಯ ಕಣಗಳು ಸಿಡಿದು ಚಲಿಸುತ್ತಿರುತ್ತವೆ ಎಂದು ವಾದವನ್ನು ಮಂಡಿಸಿದರು. ಅದೊಂದು ಕ್ರಾಂತಿಕಾರಕ ವೈಜ್ಞಾನಿಕ ಸಂಶೋಧನೆಯಾಗಿದ್ದರೂ ಕೂಡ ಜಗತ್ತಿನ ಬಹುತೇಕ ವಿಜ್ಞಾನಿಗಳು ಸ್ಟೀಫನ್ ಅವರ ಮಾತನ್ನು ಒಪ್ಪಲಿಲ್ಲ. ಭವಿಷ್ಯದ ದಿನಗಳಲ್ಲಿ ಹಾಕಿಂಗ್ ಅವರ ಸಿದ್ಧಾಂತವು ನೂರು ಪ್ರತಿಶತ ನಿಜ ಎಂಬ ನಿಟ್ಟಿನಲ್ಲಿ ಇದೀಗ ಸಂಶೋಧನೆಗಳು ಜರುಗುತ್ತಿವೆ.

ತಮ್ಮೆಲ್ಲ ಸಾಧನೆಗಳ ಪರಿಣಾಮವಾಗಿ ಟಿಫನ್ ಹಾಕಿಂಗ್ ಅವರು 1974ರಲ್ಲಿ ಅವರು ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾದರು.

1982 ರಲ್ಲಿ ಬ್ರಿಟಿಷ್ ಸರ್ಕಾರ ತನ್ನ ರಾಷ್ಟದ ಅತ್ಯುಚ್ಚ ಪ್ರಶಸ್ತಿಯಾದ "ಕಮಾಂಡರ ಆಫ್ ದ ಆರ್ಡರ್ ಆಫ್ ದ ಬ್ರಿಟಿಷ್ ಎಂಪೈರ್" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಎಲ್ಲ ರೀತಿಯ ವೈಜ್ಞಾನಿಕ ಚಿಕಿತ್ಸಾ ವರದಿಗಳ ಪ್ರಕಾರ ಕೇವಲ ಎರಡು ವರ್ಷದಲ್ಲಿ ಸಾಯುತ್ತಾನೆ ಎಂಬ ಮಾತನ್ನು ಸುಳ್ಳು ಮಾಡಿ ಸುಮಾರು 50 ವರ್ಷಕ್ಕೂ ಹೆಚ್ಚು ಕಾಲ ಆತ ಬದುಕಿದ್ದ. ರೋಗದೊಂದಿಗಿನ ಗುದ್ದಾಟದಲ್ಲಿ ಆತನೆಂದೂ ಗೆಲ್ಲಲಿಲ್ಲ ಆದರೆ ತನ್ನ ರೋಗವು ತನ್ನನ್ನು ಸೋಲಿಸಲು ಬಿಡಲಿಲ್ಲ. ಸೋಲನ್ನೇ ಸೋಲಿಸಿದ ಮಹಾ ವಿಜ್ಞಾನಿ ಆತ. ಆತನ ಮನಸ್ಸಿಗೆ ಮತ್ತು ಬದುಕಿಗೆ ಒಂದು ಗುರಿ ಬೇಕಾಗಿತ್ತು,ಆತನ ಗುರಿ ದೈಹಿಕ ತೊಂದರೆಗಳನ್ನು ಮೀರಿ ಆತನನ್ನು ಬದುಕಿನೆಡೆಗೆ ತಳ್ಳುತ್ತಿತ್ತು. ಬದುಕಿನಲ್ಲಿ ಆತ ಹೊಂದಿದ ಸಾಧನೆಯ ಗುರಿಯ ಶಕ್ತಿಯ ಮುಂದೆ ಆತನ ಎಲುಬುಗಳ ಅಶಕ್ತತೆ ಸೋತಿತ್ತು.

ಸ್ನೇಹಿತರೆ ಬದುಕು ಇಷ್ಟೇ ಅಲ್ವೇ? ನೀವು ತಲುಪಬೇಕೆಂದಿರುವ ಗುರಿಯನ್ನು ನೀವು ಕಂಡುಕೊಂಡರೆ ನಿಮಗಿರುವ ಸೀಮಿತ ಅವಕಾಶಗಳು ಕೂಡ ನಿಮಗೆ ಬದುಕಿನಲ್ಲಿ ಸಾಧನೆಯ ಪಥಗಳಾಗಬಹುದು ಎಂಬುದನ್ನು ಆತ ನಿರೂಪಿಸಿದ. ದೃಢ ಸಂಕಲ್ಪವನ್ನು ಹೊಂದಿದ ವ್ಯಕ್ತಿ ಅಚಲ ಶ್ರದ್ಧೆ, ನಿರಂತರ ಪರಿಶ್ರಮ ಮತ್ತು ಸಾಧನೆಯ ಮೂಲಕ ಖಂಡಿತವಾಗಿಯೂ ತನ್ನ ಗುರಿಯನ್ನು ತಲುಪುತ್ತಾನೆ ಎಂಬುದಕ್ಕೆ ಮೇರು ಉದಾಹರಣೆಯಾಗಿ ಆತ ನಮ್ಮ ಮುಂದಿದ್ದ. ಎಲ್ಲಿಯವರೆಗೂ ನಿಮ್ಮ ಮೆದುಳು ಕ್ರಿಯಾಶೀಲವಾಗಿರುತ್ತದೆಯೋ ಎಲ್ಲಿಯವರೆಗೂ ನಿಮಗೆ ನಿಮ್ಮ ಮೆದುಳನ್ನು ಸಶಕ್ತವಾಗಿ ಬಳಸುವ ವಿಧಾನದ ಅರಿವಿದೆಯೋ ಕಲಿಯುವ ಹಂಬಲ ಮತ್ತು ಹೊಸದೇನನ್ನಾದರೂ ಅನ್ವೇಷಿಸುವ ಇಚ್ಛಾಶಕ್ತಿ ಇದೆಯೋ ಅಲ್ಲಿಯವರೆಗೂ ನಿಮ್ಮ ಇಚ್ಛಾಶಕ್ತಿಯಿಂದ ಜಗತ್ತಿನಲ್ಲಿ ಬದಲಾವಣೆ ತರಲು ನಿಮಗೆ ಸಾಧ್ಯವಿದೆ. ಎಂಬುದನ್ನು ತೋರಿಸಿದಾತ ಸ್ಟೀಫನ್ ಹಾಕಿಂಗ್.

ಬ್ರಹ್ಮಾಂಡದಲ್ಲಿ ಕಪ್ಪು ಕುಳಿಗಳ ಕುರಿತು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ತಮ್ಮ ಬದುಕಿನ ಪ್ರತಿ ಗಳಿಗೆಯನ್ನು ಅದ್ಭುತವಾಗಿ ಓದು ಬರಹ ಸಂಶೋಧನೆಗಳಲ್ಲಿ ತೊಡಗಿಸಿಕೊಂಡು ಅಂಗವಿಕಲತೆ ಸಾಧನೆಗೆ ಅಡ್ಡಗಾಲಲ್ಲ ಎಂಬುದನ್ನು ಸಾಧಿಸಿ ತೋರಿಸಿದ ಸ್ಟೀಫನ್ ಹಾಕಿಂಗ್ 2018ರಲ್ಲಿ ನಿಧನ ಹೊಂದಿದರು.

ತೂಕ ಹೆಚ್ಚಾಗಿ ಮೊಣಕಾಲು ನೋವು, ವಯೋ ಸಹಜವಾಗಿ ಸಂದುಗಳಲ್ಲಿ ಹಿಡಿತ ಎಂದು ಹಿರಿಯರು ಒದ್ದಾಡುವುದು ಬಿಡಿ ಚಿಕ್ಕಪುಟ್ಟ ಮಕ್ಕಳು, ಯುವ ಜನರು ತಮ್ಮ ದೈಹಿಕ ನ್ಯೂನತೆಗಳನ್ನು, ತೊಂದರೆಗಳನ್ನು ಮುಂದಿಟ್ಟು ತಾವು ಅಸಹಾಯಕರು ಎಂದು ಬಿಂಬಿಸುತ್ತಾರೆ. ಇಡೀ ದೇಹವನ್ನೇ ಗಾಲಿ ಕುರ್ಚಿಯಲ್ಲಿ ಕೂರಿಸಿದ ಬೇರೆಯವರು ಬಾಯಿಗಿಡದ ಹೊರತು ಊಟ ಮಾಡಲು ಬಾರದ, ಸ್ವತಂತ್ರವಾಗಿ ತನ್ನ ಶೌಚ ಕರ್ಮಾದಿಗಳನ್ನು ಕೂಡ ಪೂರೈಸಲು ಸಾಧ್ಯವೇ ಇಲ್ಲದ ತನ್ನ ಕೈಯ ಒಂದು ಬೆರಳನ್ನು ಮಾತ್ರ ಚಲಿಸಲು ಸಾಧ್ಯವಿದ್ದ ಸ್ಟೀಫನ್ ಹಾಕಿಂಗ್ ಎಂಬ ಅದ್ಭುತ ಪರಮಾಂಗ ವಿಕಲ ಕೇವಲ ಒಂದು ಬೆರಳಿನ ಮೂಲಕ ಇಡೀ ವಿಶ್ವವೇ ಹೆಮ್ಮೆಪಡುವಂತಹ ವೈಜ್ಞಾನಿಕ ಆವಿಷ್ಕಾರಗಳನ್ನು ಮಾಡಿದ, ಪುಸ್ತಕಗಳನ್ನು ಬರೆದ, ಜನರನ್ನು ಹುರಿದುಂಬಿಸಿದ, ಸಾವಿಗೆ ಸವಾಲು ಹಾಕಿ ಅದಮ್ಯ ಉತ್ಸಾಹದ ಜೀವನವನ್ನು ಪೂರೈಸಿದ.

ಸಾಧನೆಗೆ ಬೇಕಾಗಿರುವುದು ಅದಮ್ಯ ಉತ್ಸಾಹ, ಅಚಲ ಗುರಿ, ಅದ್ಭುತ ಆತ್ಮವಿಶ್ವಾಸ, ನಿರಂತರ ಪರಿಶ್ರಮ ಮತ್ತು ಸೋಲನ್ನೇ ಸೋಲಿಸಿ ಬಿಡುವ ಛಾತಿ ಎಂಬುದನ್ನು ಸ್ಟೀಫನ್ ಹಾಕಿಂಗರಿಂದ ನಾವು ಕಲಿಯಬಹುದು ಅಲ್ವೇ ಸ್ನೇಹಿತರೆ?

# ಎನ್‌ಓಸಿ ನೀಡದ ಪುರಾತತ್ವ ಇಲಾಖೆ



**ಮೊದಲ ಪುಟದಿಂದ:** ಪಡೆಯಲು ಆದೇಶಿಸಿದರು. ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ, ಪಂಚಾಯತ್ ರಾಜ್, ಲೋಕೋಪಯೋಗಿ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಪ್ರಗತಿ ವರದಿಯನ್ನು ಪರಿಶೀಲಿಸಲಾಯಿತು.

**ಶೈಕ್ಷಣಿಕ ಸುಧಾರಣೆಗೆ ಒತ್ತು:** ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಲೇಪಾಕ್ಷಪ್ಪ ಮಾತನಾಡಿ, ಈ ಸಾಲಿನಲ್ಲಿ 29 ಅಂಶಗಳ ಕಾರ್ಯಕ್ರಮವನ್ನು ಆರಂಭಿಸಿದ್ದು, ಈ ಬಾರಿ ಹೆಚ್ಚು ಫಲಿತಾಂಶ ಬರುವುದಕ್ಕೆ ಹೆಚ್ಚು ಒತ್ತು ನೀಡಲಾಗುವುದು ಎಂದು ಶಾಸಕರಿಗೆ ತಿಳಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವೈ.ಎಚ್. ಚಂದ್ರಶೇಖರ್, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಅಧ್ಯಕ್ಷ ಉದಯಶಂಕರ್, ಎಇಇ ಕುಬೇಂದ್ರ ನಾಯ್ಕ್, ಜಯಸಿಂಹ, ನರೇಗಾ ಎಇಇ ಸೋಮಶೇಖರ್ ಯು.ಎಚ್., ಎಂ. ಮಂಜುಳಾ, ಬಿಸಿಎಂ ಸಹಾಯಕ ನಿರ್ದೇಶಕ ಭೀಮಪ್ಪ, ಎಸ್‌ಟಿ ಇಲಾಖೆಯ ಇಬ್ರಾಹಿಂ ಹಾಗೂ ಕೆಡಿಪಿ ಸಮಿತಿ ಸಭೆಯ ಸದಸ್ಯರು ಹಾಜರಿದ್ದರು

• Admissions
• Requirements
• Firm Branding
• Public Notice
• Change of Name

"Thousands of eyes, one newspaper. 'Hampi Times' delivers your message directly to Hampi Times engaged readers."
HAMPI TIMES Kannada Daily
Print & Digital News Paper
BOOK! NOW!
Scan to Read

• Obituary
• Remembrance
• Birthday wish ads
• Events Display &
• Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

16–07–2025 – ಬುಧವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉ.ಭಾದ್ರಪದ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 05:51:52 |
| ಸೂರ್ಯಾಸ್ತ | : 19:14:04 |
| ರಾಹು ಕಾಲ | : 12:33–14:13 |
| ಯಮಘಂಡ ಕಾಲ | : 07:32–09:12 |
| ಗುಳಿಕ ಕಾಲ | : 10:53–12:33 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 15–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.80 ಅಡಿ |
| ಒಳ ಹರಿವು | 37327 ಕ್ಯುಸೆಕ್ |
| ಹೊರ ಹರಿವು | 25021 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 79.135 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1607.59 ಅಡಿ |
| ಒಳ ಹರಿವು | 16142 ಕ್ಯುಸೆಕ್ |
| ಹೊರ ಹರಿವು | 211 ಕ್ಯುಸೆಕ್ |
| ಸಾಮರ್ಥ್ಯ | 33.074 ಟಿಎಂಸಿ |

# ಕರ್ನಾಟಕದ ಭಕ್ತರ ಅನುಕೂಲಕ್ಕಾಗಿ ಮಂತ್ರಾಲಯದಲ್ಲಿ ಸುವ್ಯವಸ್ಥಿತ ವಸತಿ ಗೃಹಗಳ ನಿರ್ಮಾಣಕ್ಕೆ ಕ್ರಮ

## ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ । ಶ್ರೀ ರಾಘವೇಂದ್ರ ಸ್ವಾಮಿ ದರ್ಶನ ಪಡೆದ ಸಚಿವರು

■ **ಹಂಪಿ ಟೈಮ್ಸ್ ರಾಯಚೂರ**

ಕರ್ನಾಟಕ ರಾಜ್ಯದಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಭಕ್ತರ ಅನುಕೂಲಕ್ಕಾಗಿ ಮಂತ್ರಾಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಗೃಹಗಳ ನಿರ್ಮಾಣಕ್ಕೆ ಕ್ರಮವಹಿಸುವುದಾಗಿ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಹೇಳಿದರು.

ಜುಲೈ 15ರಂದು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯಕ್ಕೆ ಭೇಟಿ ನೀಡಿ ಶ್ರೀ ರಾಘವೇಂದ್ರ ಸ್ವಾಮಿ ಅವರ ದರ್ಶನದ ಪಡೆದು, ಮಂತ್ರಾಲಯದ ಕರ್ನಾಟಕ ಛತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ನಿರ್ಮಾಣ ಮಾಡಿರುವ ನೂತನ ಹಾಗೂ ಹಳೆ ಕಟ್ಟಡಗಳ ಪರಿಶೀಲನೆ ನಡೆಸಿ ಕರ್ನಾಟಕ ರಾಜ್ಯ ವಸತಿ ಗೃಹ ಕಟ್ಟಡದ ಸಭಾಂಗಣದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮಂತ್ರಾಲಯಕ್ಕೆ ಪ್ರತಿ ದಿನ ಅಂದಾಜು 200 ಬಸ್ಸಗಳು ರಾಜ್ಯದ ಬೇರೆ ಬೇರೆ ಭಾಗಗಳಿಂದ ಬರುತ್ತವೆ. ರೈಲಿನ ಮೂಲಕವು ಜನರು ಮಂತ್ರಾಲಯಕ್ಕೆ ಬರುತ್ತಾರೆ. ಆಂಧ್ರಕ್ಕೆ ಹೋಲಿಸಿದರೆ ಶೇ.60ರಷ್ಟು ಜನರು ಕರ್ನಾಟಕ ರಾಜ್ಯದಿಂದಲೇ ಮಂತ್ರಾಲಯಕ್ಕೆ ಆಗಮಿಸುತ್ತಾರೆ. ಈ ಬಗ್ಗೆ ಮಂತ್ರಾಲಯದ ಸ್ವಾಮೀಜಿ ಅವರೊಂದಿಗೆ ಚರ್ಚಿಸಿದಾಗ, ಕರ್ನಾಟಕದಿಂದ ಬರುವ ಭಕ್ತರ ಅನುಕೂಲಕ್ಕಾಗಿ ಮಂತ್ರಾಲಯದಲ್ಲಿ ವಸತಿ ಗೃಹಗಳ ನಿರ್ಮಾಣಕ್ಕೆ ಸೂಕ್ತವಾದ ಜಾಗದ ವ್ಯವಸ್ಥೆ ಮಾಡಿಕೊಡುವುದಾಗಿ ಸ್ವಾಮೀಜಿ ಅವರು ಮಾತುಕೊಟ್ಟಿದ್ದಾರೆ ಎಂದು ಸಚಿವರು ತಿಳಿಸಿದರು.



ಮಂತ್ರಾಲಯದಲ್ಲಿ ಈಗಿರುವ ಕರ್ನಾಟಕ ರಾಜ್ಯ ವಸತಿ ಗೃಹ ಕಟ್ಟಡದ ಕಳಪೆ ಕಾಮಗಾರಿಯ ಬಗ್ಗೆ ಲೋಕಾಯುಕ್ತಕ್ಕೆ ದೂರು ಸಲ್ಲಿಕೆಯಾಗಿದೆ. ಕಳಪೆ ಕಾಮಗಾರಿ ನಡೆದಿದೆ ಎಂದು ಲೋಕಾಯುಕ್ತರಿಂದ ಸಾಬೀತಾದಲ್ಲಿ ಸಂಬಂಧಿಸಿದ ಗುತ್ತಿಗೆದಾರರಿಂದಲೇಕಟ್ಟಡದದುರಸ್ತಿಮಾಡಿಸಲಾಗುವುದು. ಇಲ್ಲವಾದಲ್ಲಿ ಕಟ್ಟಡದಲ್ಲಿನ ನ್ಯೂನ್ಯತೆಗಳ ಬಗ್ಗೆ ಪರಿಶೀಲಿಸಿ ಮಾಸ್ಟರ್ ಪ್ಲಾನ್ ರೂಪಿಸಿ ಕಟ್ಟಡವನ್ನು ಸರಿಪಡಿಸಲಾಗುವುದು ಎಂದು ಸಚಿವರು ಹೇಳಿದರು.

**ಆನಲೈನ್ ವ್ಯವಸ್ಥೆಗೆ ಕ್ರಮ:** ಧಾರ್ಮಿಕ ದತ್ತಿ ಇಲಾಖೆಯಿಂದ ಮಂತ್ರಾಲಯದಲ್ಲಿ ನಿರ್ಮಾಣ ಮಾಡಿರುವ ಕರ್ನಾಟಕ ರಾಜ್ಯದ ವಸತಿ ಗೃಹದಲ್ಲಿ ಒಟ್ಟು 50 ಕೋಣೆಗಳಿವೆ. ಇವುಗಳನ್ನು ಕರ್ನಾಟಕದಿಂದ ಬರುವ ಭಕ್ತರಿಗೆ ಮೀಸಲಿರಿಸಿದೆ. ತಲಾ ನಾಲ್ಕು ಜನರು 12 ಗಂಟೆ ಸಮಯ ವಾಸ್ತವ್ಯ ಮಾಡಲು 500 ರೂಪಾಯಿ ದರ ನಿಗದಿಪಡಿಸಲಾಗಿದೆ. 12 ಗಂಟೆ ಮೀರಿದಾಗ 1000 ರೂ. ದರ ನಿಗದಿಪಡಿಸಲಾಗುತ್ತದೆ. ಒಟ್ಟು 50 ರೂಮುಗಳ ಪೈಕಿ 30 ರೂಮುಗಳನ್ನು ಆನಲೈನ್ ಮೂಲಕ ಹಾಗೂ ಇನ್ನುಳಿದ 20 ರೂಮುಗಳನ್ನು ನೇರವಾಗಿ ಹಣ ಪಾವತಿಸಿ ಬುಕ್ಕಿಂಗ್ ಮಾಡುವ ವ್ಯವಸ್ಥೆಗೆ ಕ್ರಮ ವಹಿಸುವುದಾಗಿ ಸಚಿವರು ತಿಳಿಸಿದರು.

**ಟೂರಿಸಂ ಇಲಾಖೆಗೆ ಉಸ್ತುವಾರಿ:** ಕಲ್ಯಾಣ ಮಂಟಪ, ಛತ್ರ, ವಸತಿ ಗೃಹಗಳ ನಿರ್ಮಾಣ ಪ್ರಕರಣವು ನ್ಯಾಯಾಲಯದ ಅಂಗಳದಲ್ಲಿರುವುದರಿಂದ ಕಟ್ಟಡದ ದುರಸ್ತಿಗೆ ತೊಡಕಾಗಿ ಪರಿಣಮಿಸಿದೆ. ಮಂತ್ರಾಲಯ, ಶ್ರೀಶೈಲಂ, ತಿರುಪತಿ ಸೇರಿದಂತೆ ನಾನಾ ಕಡೆಗಳಲ್ಲಿ ವಿವಾದದಿಂದ ಕೂಡಿರುವ ಜಾಗದ ಸಮಸ್ಯೆಯನ್ನು ಬೇಗನೆ ಇತ್ಯರ್ಥಪಡಿಸಬೇಕು ಎಂದು ಖುದ್ದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಆಯಾ ದತ್ತಿ ಸಂಸ್ಥೆಗಳಿಗೆ ಪತ್ರ ಬರೆದಿದ್ದಾರೆ ಎಂದು ತಿಳಿಸಿದ ಸಚಿವರು, ಉತ್ತಮ ದರ್ಜೆಯ ನಿರ್ವಹಣೆಗಾಗಿ ಮಂತ್ರಾಲಯದಲ್ಲಿರುವ ಕರ್ನಾಟಕ ವಸತಿ ಗೃಹಗಳ ಕಟ್ಟಡದ ನಿರ್ಹಹಣೆಯ ಉಸ್ತುವಾರಿಯನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸುವ ಬಗ್ಗೆ ಪ್ರವಾಸೋದ್ಯಮ ಸಚಿವರಾದ ಹೆಚ್ ಕೆ ಪಾಟೀಲ ಅವರೊಂದಿಗೆ ಮಾತನಾಡುವುದಾಗಿ ಸಚಿವರು ತಿಳಿಸಿದರು. ಈ ವೇಳೆ ಪ್ರವಾಸೋದ್ಯಮ ಇಲಾಖೆಯ ಆಯುಕ್ತರಾದ ವೆಂಕಟೇಶ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಕಿಶೋರ್ ಕುಮಾರ ಪಾಟೀಲ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಕೃಷ್ಣ ಶಾವಂತಗೇರಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಎಸ್.ಚಂದ್ರಶೇಖರ, ಕರ್ನಾಟಕ ವಸತಿ ಗೃಹ ಕಟ್ಟಡದ ಅಧಿಕಾರಿ ಆಂಜನೇಯ ಸೇರಿದಂತೆ ಇನ್ನಿತರರು ಇದ್ದರು.

# ರೈತರ ಹೋರಾಟಕ್ಕೆ ಮಣಿದ ಸರ್ಕಾರ

## ಭೂಸ್ವಾಧೀನ ಪ್ರಕ್ರಿಯೆ ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ : ಸಿಎಂ

## ರೈತ ಹೋರಾಟಗಾರರಲ್ಲಿ ಇಮ್ಮಡಿಗೊಂಡ ಹರ್ಷ, ವಿಜಯೋತ್ಸವ



■ **ಹಂಪಿ ಟೈಮ್ಸ್ ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ವಿಧಾನಸೌಧದ ಸಭಾಂಗಣದಲ್ಲಿ ನಡೆದ ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಅಧಿಕಾರಿಗಳ ಹಾಗೂ ರೈತ ಮುಖಂಡರ ಸಭೆಯಲ್ಲಿ ಮತ್ತು ಬಳಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿದ ಮುಖ್ಯಾಂಶಗಳು:

– ದೇವನಹಳ್ಳಿ ತಾಲೂಕು ಚನ್ನರಾಯ ಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ

– ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಲು ನಿರ್ಧರಿಸಿದೆ. ಕೆಲವು ರೈತರು ಜಮೀನು ನೀಡಲು ಸಿದ್ಧರಿರುವುದಾಗಿ ಮುಂದೆ ಬಂದಿದ್ದಾರೆ. ಜಮೀನು ನೀಡಲು ಇಚ್ಛಿಸುವವರ ಜಮೀನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲಿದ್ದು, ಅವರಿಗೆ ಹೆಚ್ಚಿನ ಪರಿಹಾರ ಮತ್ತು ಅಭಿವೃದ್ಧಿಪಡಿಸಿದ ಜಮೀನು ನೀಡಲಾಗುವುದು.

– ಅಂತಹ ರೈತರಿಗೆ ಮಾರ್ಗಸೂಚಿ ದರಕ್ಕಿಂತ ಹೆಚ್ಚುವರಿ ದರವನ್ನು ನೀಡಲಿದೆ. ಅಲ್ಲಿ ಕೃಷಿ ಚಟುವಟಿಕೆಗಳನ್ನು ಮುಂದುವರೆಸಲು ಬಯಸುವ ರೈತರು ಕೃಷಿ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಬಹುದಾಗಿದೆ.

– ದೇವನಹಳ್ಳಿ ತಾಲೂಕು ಬೆಂಗಳೂರಿಗೆ ಹತ್ತಿರದ್ದಲ್ಲಿದ್ದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಅಲ್ಲಿಯೇ ಇದೆ. ರಾಜ್ಯದ ಪ್ರತಿಯೊಬ್ಬರ ವರಮಾನ ಹೆಚ್ಚಳವಾಗಬೇಕಿದ್ದರೆ ಅಭಿವೃದ್ಧಿ ಕಾರ್ಯ ನಡೆಯಬೇಕಾಗಿದೆ. ಹೊಸ ಕೈಗಾರಿಕೆಗಳ ಪ್ರಾರಂಭಕ್ಕೆ, ಬಂಡವಾಳ ಹೂಡಿಕೆಗೆ ಜಮೀನಿನ ಅಗತ್ಯವಿದೆ. ಜಮೀನು ಸ್ವಾಧೀನ ಪಡಿಸಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ನೀಡಬೇಕಾಗುತ್ತದೆ.

– ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಲು ನಿರ್ಧರಿಸಿದೆ. ಆದರೆ ಕೆಲವು ರೈತರು ಜಮೀನು ನೀಡಲು ಸಿದ್ಧರಿರುವುದಾಗಿ ಮುಂದೆ ಬಂದಿದ್ದಾರೆ. ಜಮೀನು ನೀಡಲು ಇಚ್ಛಿಸುವವರ ಜಮೀನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲಿದ್ದು, ಅವರಿಗೆ ಹೆಚ್ಚಿನ ಪರಿಹಾರ ಮತ್ತು ಹೆಚ್ಚಿನ ವಿಸ್ತೀರ್ಣದ ಅಭಿವೃದ್ಧಿಪಡಿಸಿದ ನಿವೇಶನ ನೀಡಲಾಗುವುದು.

– 1777 ಎಕ್ರೆ ಜಮೀನು ದೇವನಹಳ್ಳಿ ತಾಲೂಕಿನಲ್ಲಿ ಸರ್ಕಾರ ಸ್ವಾಧೀನಪಡಿಸಿ, ಅಲ್ಲಿ ಏರೋಸ್ಪೇಸ್ ಪ್ರಾರಂಭಿಸುವುದು ಸರ್ಕಾರದ ಉದ್ದೇಶ. ಬೆಂಗಳೂರಿನ ಸಮೀಪದಲ್ಲಿ ಇದಕ್ಕೆ ಜಮೀನು ಒದಗಿಸಲು ಕೋರಿಕೆ ಸ್ವೀಕರಿಸಲಾಗಿತ್ತು.

– ರಾಜ್ಯದಲ್ಲಿ ಭೂಸ್ವಾಧೀನ ವಿರುದ್ಧ ಈ ಮಟ್ಟದ ಪ್ರತಿಭಟನೆ ನಡೆದಿಲ್ಲ. ಅದು ಫಲವತ್ತಾದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ. ಅಲ್ಲಿನ ರೈತರು ಆ ಜಮೀನಿನ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಆದ್ದರಿಂದ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕೆಂದು ಹೋರಾಟಗಾರರು ಸ್ಪಷ್ಟಪಡಿಸಿದ್ದಾರೆ.

– ಸರ್ಕಾರ ರೈತರು, ಜಮೀನುದಾರರು ಸೇರಿದಂತೆ ಎಲ್ಲರ ಅಹವಾಲುಗಳನ್ನು ಆಲಿಸಿದೆ. ರಾಜ್ಯದ ಅಭಿವೃದ್ಧಿಗೆ, ಬೆಳವಣಿಗೆಗೆ ಕೈಗಾರಿಕೆ ಉತ್ತೇಜನ ನೀಡುವುದು ಅಗತ್ಯವಿದೆ.

– ಯಾವುದೇ ಕಾರಣಕ್ಕೆ ಜಮೀನು ಸ್ವಾಧೀನ ಕೈಬಿಟ್ಟರೆ ಈ ಕೈಗಾರಿಕೆ ಬೇರೆ ಕಡೆ ಹೋಗುವ ಸಾಧ್ಯತೆ ಇದೆ. ಆದರೂ ಸರ್ಕಾರ ರೈತಪರವಾಗಿದ್ದು, ಅವರ ಬೇಡಿಕೆಗಳನ್ನು ಪರಿಗಣಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಅವರು ಹೇಳಿದರು.

– ಮುಖ್ಯಮಂತ್ರಿ ಅವರ ಸಾಮಾಜಿಕ ನ್ಯಾಯ ಕೇವಲ ನುಡಿಯಲ್ಲಿ ಮಾತ್ರವಲ್ಲ ನಡೆಯಲ್ಲೂ ಅದನ್ನು ಇಂದು ಅವರು ತೋರಿಸಿಕೊಟ್ಟಿದ್ದಾರೆ ಎಂದು ಪ್ರಕಾಶ್ ರಾಜ್ ಅವರು ಹೇಳಿದರು.

– ಸಚಿವರಾದ ಎಂ.ಬಿ.ಪಾಟೀಲ್, ಕೆ. ಎಚ್.ಮುನಿಯಪ್ಪ, ಹೆಚ್.ಕೆ.ಪಾಟೀಲ್, ಕೃಷ್ಣ ಭೈರೇಗೌಡ, ಪ್ರಿಯಾಂಕ ಖರ್ಗೆ, ಭೈರತಿ ಸುರೇಶ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕಾನೂನು ಸಲಹೆಗಾರ ಪೊನ್ನಣ್ಣ, ಅಡ್ವಕೇಟ್ ಜನರಲ್ ಶಶಿಕಿರಣ ಶೆಟ್ಟಿ, ರೈತ ಪ್ರತಿನಿಧಿಗಳು ಮತ್ತಿತರರು ಉಪಸ್ಥಿತರಿದ್ದರು.

# ಜು.17 ರಂದು ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಪ್ರಗತಿ ಪರಿಶೀಲನಾ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ :** ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವತಿಯಿಂದ ಜು.16 ರಂದು ನಡೆಯಬೇಕಾಗಿದ್ದ ತ್ರೈಮಾ ಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಕಾರಣಂತರಗಳಿಂದ ಮುಂದೂಡಲಾಗಿದ್ದು, ಸಭೆಯನ್ನು ಜು.17 ರಂದು ಮದ್ಯಾಹ್ನ 03 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಬಾಲ್ಯವಿವಾಹ ಕುರಿತು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

## SSLC ಹಂಪಿ ಟೈಮ್ಸ್ ಮಾರ್ಗದರ್ಶಿ — ಈ ಬಾರಿ ಫಲಿತಾಂಶ ನಮ್ಮದೆ

ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸ ಮಾಡಿ

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಗಣಿತ – ಬಹುಪದೋಕ್ತಿಗಳು

**ರೇಖಾತ್ಮಕ ಬಹುಪದೋಕ್ತಿ :-** ಡಿಗ್ರಿ 1 ಆಗಿರುವ ಬಹುಪದೋಕ್ತಿಯೇ ರೇಖಾತ್ಮಕ ಬಹುಪದೋಕ್ತಿ. ರೇಖಾತ್ಮಕ ಬಹುಪದೋಕ್ತಿಯ ಸಾಮಾನ್ಯ ರೂಪ - $ax + b = 0$ ಹಾಗೂ ಶೂನ್ಯತೆಗಳ ಸಂಖ್ಯೆ - 1

**ವರ್ಗ ಬಹುಪದೋಕ್ತಿ :-** ಡಿಗ್ರಿ 2 ಆಗಿರುವ ಬಹುಪದೋಕ್ತಿಯೇ ವರ್ಗ ಬಹುಪದೋಕ್ತಿ. ವರ್ಗ ಬಹುಪದೋಕ್ತಿಯ ಸಾಮಾನ್ಯ ರೂಪ - $ax^2 + bx + c = 0$ ಹಾಗೂ ಶೂನ್ಯತೆಗಳ ಸಂಖ್ಯೆ - 2

**ಘನ ಬಹುಪದೋಕ್ತಿ :-** ಡಿಗ್ರಿ 3 ಆಗಿರುವ ಬಹುಪದೋಕ್ತಿಯೇ ಘನ ಬಹುಪದೋಕ್ತಿ. ಘನ ಬಹುಪದೋಕ್ತಿಯ ಸಾಮಾನ್ಯ ರೂಪ - $ax^3 + bx^2 + cx + d = 0$ ಹಾಗೂ ಶೂನ್ಯತೆಗಳ ಸಂಖ್ಯೆ - 3

**$\alpha$ ಮತ್ತು $\beta$ ಗಳು $ax^2 + bx + c$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ,**

ಶೂನ್ಯತೆಗಳ ಮೊತ್ತ , $\alpha + \beta = \frac{-b}{a}$

ಶೂನ್ಯತೆಗಳ ಗುಣಲಬ್ಧ , $\alpha\beta = \frac{c}{a}$

**$\alpha$ , $\beta$ ಮತ್ತು $\gamma$ ಗಳು $ax^3 + bx^2 + cx + d$ ಎಂಬ ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ,**

ಶೂನ್ಯತೆಗಳ ಮೊತ್ತ , $\alpha + \beta + \gamma = \frac{-b}{a}$ ಮತ್ತು

ಶೂನ್ಯತೆಗಳ ಮೊತ್ತ , $\alpha\beta + \beta\gamma + \gamma\alpha = \frac{c}{a}$

ಶೂನ್ಯತೆಗಳ ಗುಣಲಬ್ಧ , $\alpha\beta\gamma = \frac{-d}{a}$

**ಉದಾ :- $P(x) = 5x^2 - 6x^3 - 7x + 1$ ಬಹುಪದೋಕ್ತಿಯ ಡಿಗ್ರಿ ( ಮಹತ್ತಮ ಘಾತ ) - 3**

**ಪ್ರಶ್ನೆ :- $P(x) = 5x^4 - 2x^3 + 6x + 1$ ಬಹುಪದೋಕ್ತಿಗಳ ಡಿಗ್ರಿ ( ಮಹತ್ತಮ ಘಾತ ) ಬರೆಯಿರಿ.**

**ಉದಾ :- $P(x) = x^2 + 7x + 10$ ಈ ವರ್ಗ ಬಹುಪದೋಕ್ತಿಯ ಶೂನ್ಯತೆಯನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ. ( March – 2025 )**

$P(x) = x^2 + 7x + 10 \Rightarrow P(x) = x^2 + 5x + 2x + 10$

$\Rightarrow P(x) = x(x+5) + 2(x+5) \Rightarrow P(x) = (x+5)(x+2)$

$\Rightarrow x+5 = 0 \Rightarrow x = -5 \Rightarrow x+2 = 0 \Rightarrow x = -2$

$\Rightarrow \alpha = -5 , \beta = -2$

ಶೂನ್ಯತೆಗಳ ಮೊತ್ತ , $\alpha + \beta = (-5) + (-2) \Rightarrow -7$

ಶೂನ್ಯತೆಗಳ ಗುಣಲಬ್ಧ , $\alpha\beta = (-5)(-2) \Rightarrow 10$

$P(x) = x^2 - (\alpha + \beta)x + \alpha\beta$

$\Rightarrow P(x) = x^2 - (-7)x + 10 \Rightarrow P(x) = x^2 + 7x + 10$

**ಪ್ರಶ್ನೆ- 1) $P(x) = (x-2)(x-1)$ ಈ ವರ್ಗ ಬಹುಪದೋಕ್ತಿಯ ಶೂನ್ಯತೆಯನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ. ( May – 2025 )**

**ಪ್ರಶ್ನೆ – 2) $P(x) = x^2 - 6x + 8$ ಈ ವರ್ಗ ಬಹುಪದೋಕ್ತಿಯ ಶೂನ್ಯತೆಯನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.**

**ಉದಾ :- ಶೂನ್ಯತೆಗಳ ಮೊತ್ತ -3 ಮತ್ತು ಶೂನ್ಯತೆಗಳ ಗುಣಲಬ್ಧ 2 ಆಗಿರುವ ವರ್ಗ ಬಹುಪದೋಕ್ತಿ ಹಾಗೂ ಶೂನ್ಯತೆಗಳನ್ನು ಕಂಡುಹಿಡಿಯಿರಿ.**

$\alpha + \beta = -3 \qquad \alpha\beta = 2$

$P(x) = x^2 - (\alpha + \beta)x + \alpha\beta$

$\Rightarrow P(x) = x^2 - (-3)x + 2 \Rightarrow P(x) = x^2 + 3x + 2$

$\Rightarrow P(x) = 0 \quad \Rightarrow x^2 + 3x + 2 = 0$

$\Rightarrow x^2 + 2x + 1x + 2 = 0 \Rightarrow x(x+2) + 1(x+2) = 0$

$\Rightarrow (x+2)(x+1) = 0$

$\Rightarrow x+2 = 0 \Rightarrow x = -2 \quad \Rightarrow x+1 = 0 \Rightarrow x = -1$

**ಪ್ರಶ್ನೆ :- ಶೂನ್ಯತೆಗಳ ಮೊತ್ತ -2 ಮತ್ತು ಶೂನ್ಯತೆಗಳ ಗುಣಲಬ್ಧ -8 ಆಗಿರುವ ವರ್ಗ ಬಹುಪದೋಕ್ತಿ ಹಾಗೂ ಶೂನ್ಯತೆಗಳನ್ನು ಕಂಡುಹಿಡಿಯಿರಿ.**

Hampi Times Margadarshi 2025-26

HAMPI TIMES
Print & Digital Daily News Paper
Contact fof Ads : M: 9448633038
Scan For Digital Colourful
HAMPI TIMES E-paper

ಮಾರ್ಗದರ್ಶಿ ಗಣಿತ ಶಿಕ್ಷಕರು:
ಶರ್ಮತ್ ಐ ಕಣದಮನಿ
ಸರ್ಕಾರಿ ಪ್ರೌಢಶಾಲೆ ಕುಂಚೂರು
ಹರಪನಹಳ್ಳಿ ತಾಲೂಕು.

